2016 ಕ.ತೀ.ವ. 545

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಬಿ. ಶ್ರೀನಿವಾಸೇಗೌಡ

# ಶ್ರೀಯುತ ಜಗದೀಶ್ ಪೂಂಜ –ವಿರುದ್ಧ– ಸೌತ್ ಕೆನರಾ ಹೋಟೆಲ್ ಕಾಂಪ್ಲೆಕ್ಸ್ ಪ್ರೈ.ಲಿ., ಬೆಂಗಳೂರು ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ 96ನೇ ಪ್ರಕರಣದ ಮೇರೆಗಿನ ಮೊದಲ ನಿಯತ ಅಪೀಲು.

ಅಧಿವಿಚಾರಣಾ ನ್ಯಾಯಾಲಯವು, ವಾದಿಯ ವಾದಪತ್ರವು ದೋಷಪೂರ್ಣವಾಗಿದೆ ಮತ್ತು ವಾದಿಯು ವಾದಪತ್ರದಲ್ಲಿ ಸಹಿ ಮಾಡಿರುವುದಿಲ್ಲ ಹಾಗೂ ಮುಖ್ತ್ಯಾರನಾಮೆಧಾರಕನ ಹೆಸರಿನಲ್ಲಿರುವ ಅವನಿಂದ ಬರೆದುಕೊಡಲಾಗಿರುವ ಸಾಮಾನ್ಯ ಮುಖ್ತ್ಯಾರನಾಮೆಯನ್ನು ಹಾಜರುಪಡಿಸಿರುವುದಿಲ್ಲವೆಂಬ ಆಧಾರದ ಮೇಲೆ, ಕಾಲ ಪರಿಮಿತಿಯ ಕಾನೂನಿನ ಮೂಲಕ ನಿಷೇದಿಸಿರುವಂತೆ ವಾದಿಯ ದಾವೆಯನ್ನು ವಜಾಗೊಳಿಸಿರುವುದನ್ನು ಈ ನಿಯತ ಮೊದಲ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ.

ಕಾಲಪರಿಮಿತಿಯ ಪ್ರಶ್ನೆಯು, ಸಾಮಾನ್ಯವಾಗಿ ಕಾನೂನು ಮತ್ತು ವಾಸ್ತವಾಂಶದ ಸಂಯೋಜಿತ ಪ್ರಶ್ನೆಯಾಗಿರುತ್ತದೆ. ಕಾಲಪರಿಮಿತಿಯ ವಾದವನ್ನು ಪ್ರತಿಯೊಂದು ಪ್ರಕರಣದಲ್ಲೂ, ಕಾಲಪರಿಮಿತಿಯ ಆರಂಭಿಕ ಅಂಶವನ್ನು, ಸಂಪೂರ್ಣವಾಗಿ ವಾಸ್ತವಾಂಶದ ಪ್ರಶ್ನೆಯಾಗಿರುವುದೆಂದು ಖಚಿತಪಡಿಸಬೇಕಾಗಿರುವುದರಿಂದ, ವಾಸ್ತವಾಂಶಗಳಿಂದ ಪ್ರತ್ಯೇಕಿತವಾದ ಕಾನೂನಿನ ಸಂಕ್ಷಿಪ್ತ ತತ್ವದಂತೆ ನಿರ್ಣಯಿಸಲಾಗುವುದಿಲ್ಲ. ಆದ್ದರಿಂದ, ಪ್ರಸ್ತುತ, ಕಾಲಪರಿಮಿತಿಯ ವಾದವು

* ಆರ್‌ಎಫ್‌ಎ ಸಂಖ್ಯೆ: 438/2009, ದಿನಾಂಕ 12ನೇ ಮಾರ್ಚ್ 2015.

ವಾಸ್ತವಾಂಶ ಮತ್ತು ಕಾನೂನಿನ ಸಂಯೋಜಿತ ಪ್ರಶ್ನೆಯೆಂದು ಇತ್ಯರ್ಥವಾಗಿರುತ್ತದೆ. ವಾಸ್ತವ ವಿವಾದಾಂಶಗಳ ಜೊತೆಗೆ ಕಾನೂನಿನ ವಿವಾದಗಳನ್ನು ಅಧಿವಿಚಾರಿಸುವ ಅಧಿಕಾರ ವ್ಯಾಪ್ತಿಯನ್ನು, ಇಡೀ ದಾವೆಯನ್ನು ಕೇವಲ ಕಾನೂನಿನ ವಿವಾದಾಂಶಗಳ ಮೇಲೆ ವಿಲೆ ಮಾಡಬಹುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ ಮಾತ್ರ ಚಲಾಯಿಸಬಹುದು. (ಪ್ಯಾರಾ 21)

ಪ್ರಸ್ತುತ ಮೊಕದ್ದಮೆಯಲ್ಲಿ, ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶದ ಮೇಲೆ ಸಾಕ್ಷ್ಯವನ್ನು ಮಂಡಿಸಲು ಅನುಮತಿ ಕೋರಿ, ವಾದಿಯು ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ, ಮುಖ್ಯ ಸಾಕ್ಷ್ಯಕ್ಕೆ ಅನುಮತಿ ನೀಡದೆ, ವಾದಪತ್ರದಲ್ಲಿನ ದೃಢೋಕ್ತಿಗಳ ಆಧಾರದ ಮೇಲೆ ಮಾತ್ರ ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ನಿರ್ಧರಿಸುವುದು, ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಕಾನೂನು ಬಾಹಿರವಾದುದಾಗಿರುತ್ತದೆ. (ಪ್ಯಾರಾ 22)

ಕಾಲಪರಿಮಿತಿಯ ನಿಷೇಧದ ವಾದವನ್ನು ಪ್ರತಿವಾದಿಯು ಎತ್ತಿದಾಗ, ನ್ಯಾಯಾಲಯವು ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ರೂಪಿಸಲು ಬದ್ಧವಾಗಿರುತ್ತದೆ. ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು, ಪ್ರಾಥಮಿಕ ವಿವಾದಾಂಶದಂತೆ, ಅಧಿವಿಚಾರಿಸದೆ, ಸದರಿ ವಿವಾದಾಂಶವನ್ನು, ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ಒಳಗೊಂಡಂತೆ ದಾವೆಯಲ್ಲಿ ರೂಪಿಸಿದ ಎಲ್ಲಾ ವಿವಾದಾಂಶಗಳ ಮೇಲೂ ಸಾಕ್ಷ್ಯವನ್ನು ದಾಖಲಿಸಿದ ತರುವಾಯ ಸದರಿ ವಿವಾದಾಂಶವನ್ನು ನಿರ್ಧರಿಸಬೇಕಾಗುತ್ತದೆ. ಆ ತರುವಾಯ ಮಾತ್ರವೇ ನ್ಯಾಯಾಲಯವು, ದಾವೆಯನ್ನು ಕಾಲಪರಿಮಿತಿಯ ಕಾನೂನಿನಿಂದ ದಾವೆಯನ್ನು ಪ್ರತಿಷೇಧಿಸಲಾಗಿದೆಯೇ ಎಂಬ ಪ್ರಶ್ನೆಯನ್ನು ನಿರ್ಧರಿಸಬೇಕಾಗಿರುತ್ತದೆ. ಆದ್ದರಿಂದ ಸಿವಿಲ್ ಪ್ರಕ್ರಿಯಾ ಸಂಹಿತೆಯ 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಕಾಲಪರಿಮಿತಿಯನ್ನು, ಪ್ರತಿಷೇಧದ ಪ್ರಶ್ನೆಯನ್ನು ನ್ಯಾಯಾಲಯವು ವಿಶ್ಲೇಷಿಸಬೇಕೆಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ದಾವೆಯು ಕಾಲಪರಿಮಿತಿಯ ಮೂಲಕ ಪ್ರತಿಷೇಧಿತವಾಗಿದೆಯೆಂಬ ಆಧಾರದ ಮೇಲೆ ದಾವಾಪತ್ರವನ್ನು

**ತಿರಸ್ಕರಿಸಿರುವುದು ಸ್ಪಷ್ಟವಾಗಿ ಕಾನೂನುಬಾಹಿರವಾಗಿದ್ದು, ಊರ್ಜಿತವಾಗಿರುವುದಿಲ್ಲ. ವಿಷಯದ ಈ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶವು ಊರ್ಜಿತವಾಗಿರುವುದಿಲ್ಲ. (ಪ್ಯಾರಾ 29)**

**ತದನುಸಾರವಾಗಿ ನಿಯತ ಮೊದಲ ಅಪೀಲನ್ನು ಅಂಗೀಕರಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. ಎಐಆರ್ 1964 ಎಸ್‌ಸಿ 497*
*ಮೇಜರ್ ಎಸ್.ಎಸ್.ಖನ್ನಾ -ವಿರುದ್ಧ-*
*ಬ್ರಿಗೇಡಿಯರ್ ಎಫ್.ಜೆ. ದಿಲ್ಲಾನ್ (ಉಲ್ಲೇ) 18*

*2. ಎಐಆರ್ 2006 ಎಸ್‌ಸಿ 3672*
*ರಮೇಶ್ ಬಿ. ದೇಸಾಯಿ ಮತ್ತು ಇತರರು*
*-ವಿರುದ್ಧ- ಬಿಪಿನ್ ವಾಡಿಲಾಲ್ ಮೆಹ್ತಾ*
*ಮತ್ತು ಇತರರು (ಉಲ್ಲೇ) 19*

*3. (2005) 7 ಎಸ್‌ಸಿಸಿ 510*
*ಪೊಪಟ್ ಮತ್ತು ಕೊಟೆಚಾ ಪ್ರಾಪರ್ಟಿ -ವಿರುದ್ಧ-*
*ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ*
*ಸ್ಟಾಫ್ ಅಸೋಸಿಯೇಷನ್ (ಉಲ್ಲೇ) 25*

*4. (2003) 1 ಎಸ್‌ಸಿಸಿ 557*
*ಸಲೀಂ ಬಾಯ್ -ವಿರುದ್ಧ-*
*ಮಹಾರಾಷ್ಟ್ರ ರಾಜ್ಯ (ಉಲ್ಲೇ) 26*

*5. ಎಐಆರ್ (ಎಸ್‌ಸಿಡಬ್ಲ್ಯು) 2014*
*ಸತ್ತಿ ಪರದೇಶಿ ಸಮಾಧಿ -ವಿರುದ್ಧ-*
*ಎಂ. ಸಂಕುತಲ (ಉಲ್ಲೇ) 27*

ಅರ್ಜಿದಾರರ ಪರ : ಶ್ರೀ ಕೆ.ಎಂ. ನಟರಾಜ್, ಹಿರಿಯ ವಕೀಲರು, ಇವರೊಂದಿಗೆ
ಶ್ರೀ ಸಚಿನ್ ಬಿ.ಎಸ್. ವಕೀಲರು
ಪ್ರತ್ಯರ್ಜಿದಾರರ ಪರ : ಶ್ರೀ ಎಸ್. ಶೇಖರ ಶೆಟ್ಟಿ, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್** :

ಇದು ಸಿವಿಲ್ ಪ್ರಕ್ರಿಯಾ ಸಂಹಿತೆ (ಇನ್ನು ಮುಂದೆ ಸಂಕ್ಷಿಪ್ತವಾಗಿ ಸಿಪಿಸಿ ಎಂದು ಉಲ್ಲೇಖಿಸಲಾಗಿರುತ್ತದೆ)ಯ 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿ ಪ್ರತಿವಾದಿ ಸಂ.1ರವರು ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸಿ, ಕಾಲ ಪರಿಮಿತಿಯ ಕಾನೂನಿನ ಮೂಲಕ ನಿಷೇಧಿಸಿರುವಂತೆ ವಾದಿಯ ದಾವೆಯನ್ನು ವಜಾಗೊಳಿಸಿರುವ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ವಾದಿಯು ಸಲ್ಲಿಸಿರುವ ನಿಯತ ಮೊದಲ ಅಪೀಲಾಗಿರುತ್ತದೆ.

2. ವಾದಿಯ ಅವಿಭಜಿತ 1/17ನೇ ಹಕ್ಕಿಗೆ ಸಂಬಂಧಿಸಿದಂತೆ, ಅನುಸೂಚಿತ ಸ್ವತ್ತಿನ ಸಂಬಂಧದಲ್ಲಿ 29.06.1983ರ ದಿನಾಂಕದ ಕ್ರಯಪತ್ರವು ಕಾನೂನು ಬಾಹಿರವಾಗಿದೆ. ಜಾರಿ ಮಾಡಲು ಸಾಧ್ಯವಾಗುವಂತಿರುವುದಿಲ್ಲ. ಆರಂಭದಿಂದಲೇ ಶೂನ್ಯವಾಗಿದೆ, ರಿಕ್ತ ಮತ್ತು ಶೂನ್ಯವಾಗಿದೆ ಮತ್ತು ಆತನ ಮೇಲೆ ಬಂಧನಕಾರಿಯಾಗಿಲ್ಲ ಮತ್ತು ಫಲವತ್ತಾದ ಮತ್ತು ಬರಡು ಭೂಮಿಯನ್ನು ಪರಿಗಣನೆಗೆ ತೆಗೆದುಕೊಂಡು ಅನುಸೂಚಿತ ಸ್ವತ್ತನ್ನು 13 ಭಾಗಗಳನ್ನಾಗಿ ಮಾಡಿ, ಅದರಲ್ಲಿ ಒಂದನ್ನು ವಾದಿಗೆ ಹಂಚಿಕೆ ಮಾಡಬೇಕೆಂದು ಘೋಷಣೆ ಮಾಡಲು ವಾದಿಯು ದಾವೆಯನ್ನು ಸಲ್ಲಿಸಿರುತ್ತಾರೆ.

3. ಆರ್.ಎಸ್.ಸಂ.385/1ಎ, ಟಿ.ಎಸ್.ಸಂ.218/1ಎ ಸಂಖ್ಯೆಯುಳ್ಳ 1 ಎಕರೆ 66 ಸೆಂಟ್ ಅಳತೆಯುನ್ನು ಹೊಂದಿರುವ ಮಂಗಳೂರು

ಮಹಾನಗರ ಪಾಲಿಕೆಯ ವ್ಯಾಪ್ತಿಯೊಳಗೆ ಬರುವ ಮಂಗಳೂರು ತಾಲೂಕಿನ ಕೊಡಿಯಾಲ್ ಬೈಲು ಗ್ರಾಮದಲ್ಲಿರುವ ಸ್ಥಿರಾಸ್ತಿಯು ದಾವೆಯ ವಸ್ತು ವಿಷಯವಾಗಿರುತ್ತದೆ.

4. ವಾದಿಯು ಸದಸ್ಯನಾಗಿರುವಂಥ ಕೊಡೆಯಾಲ್‌ಗುತ್ತು ಕುಟುಂಬಕ್ಕೆ ಮೂಲತಃ ಸೇರಿದ ಇತರೆ ಸ್ವತ್ತುಗಳೊಂದಿಗೆ ಅನುಸೂಚಿತ ಸ್ವತ್ತು ಸೇರಿರುತ್ತದೆಂಬುದು ವಾದಿಯ ವಾದವಾಗಿರುತ್ತದೆ. ಇದು 'ಬಂಟ್' ಕುಟುಂಬವಾಗಿದ್ದು, ಇದನ್ನು ಅಳಿಯ ಸಂತಾನ ವಾರಸುದಾರರ ಕಾನೂನಿನಿಂದ ನಿರ್ವಹಿಸಲಾಗುತ್ತದೆ. ತತ್ಪರಿಣಾಮವಾಗಿ, ಇತರೆ ಸ್ವತ್ತುಗಳೊಂದಿಗೆ ಅನುಸೂಚಿತ ಸ್ವತ್ತಿನ ಒಂದು ಭಾಗವನ್ನು ವಾದಿಯ ಮುತ್ತಜ್ಜಿ ಸೀತಮ್ಮಳ ಶಾಖೆಗೆ ಹಂಚಿಕೆ ಮಾಡಲಾಗಿತ್ತು. ವಾದಿಯು ಆ ಶಾಖೆಯ ಸದಸ್ಯನಾಗಿದ್ದಾನೆ. ಪಾಲಾದ ತರುವಾಯ, ವಾದಿಗಳು ಮತ್ತು ಇತರೆ ಸದಸ್ಯರು ಇದನ್ನು ಇವರು ಜಂಟಿಯಾಗಿಯೇ ಅಧಿಭೋಗಿಸುತ್ತಾ ಅನುಭವಿಸುತ್ತಿರುತ್ತಾರೆ. ವಾದಿಯು ಅನುಸೂಚಿತ ಸ್ವತ್ತನ್ನು ಒಳಗೊಂಡಂತೆ, ಮೃತ ಸೀತಮ್ಮಳ ಶಾಖೆಗೆ ಹಂಚಿಕೆ ಮಾಡಲಾದ ಸ್ವತ್ತುಗಳಲ್ಲಿ 1/17 ರಷ್ಟು ಪಾಲಿಗೆ ಅರ್ಹನಾಗಿರುತ್ತಾನೆ. ವಾದಿಯು 05.07.1980ರಂದು ಜನ್ಮ ತಳೆದಿರುತ್ತಾರೆ.

5. 2007ರ ಏಪ್ರಿಲ್ ತಿಂಗಳಲ್ಲಿ, ದಾವಾ ಅನುಸೂಚಿತ ಸ್ವತ್ತಿನ ಸ್ವರೂಪವನ್ನು ಬದಲಾಯಿಸಲು ಕೆಲವು ಮಂದಿ ಪ್ರಯತ್ನಿಸುತ್ತಿದ್ದಾರೆಂಬುದು ವಾದಿಗೆ ತನ್ನ ಹಿತೈಷಿಗಳಿಂದ ತಿಳಿದು ಬಂದಿರುತ್ತದೆ. ವಾದಿಯು ಬೆಂಗಳೂರಿನಲ್ಲಿ ವಾಸಿಸುತ್ತಿರುತ್ತಾರೆ. ವಿಷಯ ತಿಳಿದ ಕೂಡಲೇ ಅವರು ಮಂಗಳೂರಿಗೆ ಬಂದು, ಈ ಸಂಬಂಧವಾಗಿ ವಿಷಯವನ್ನು ಪರಿಶೀಲಿಸಿ ಅನುಸೂಚಿತ ಸ್ವತ್ತಿನ ಸಂಬಂಧದಲ್ಲಿ ಇತ್ತೀಚಿನ ಪಹಣಿಯನ್ನು ಪಡೆದಿರುತ್ತಾರೆ. ಇದರಿಂದ ಇವರಿಗೆ, ಪಹಣಿಯಲ್ಲಿ ಮೊದಲ ಪ್ರತಿವಾದಿಯ ಹೆಸರಿರುವುದು ತಿಳಿದು ಆಘಾತಕರ ಆಶ್ಚರ್ಯವಾಗಿರುತ್ತದೆ. ಪರಿಶೀಲನೆಯ ತರುವಾಯ, ಮೊದಲ ಪ್ರತಿವಾದಿಯು ಇತರರೊಂದಿಗೆ ಷಾಮೀಲಾಗಿ, ಕೆಲವು ಸುಳ್ಳಿನ ದಸ್ತಾವೇಜುಗಳನ್ನು ಅಂದರೆ ದಿನಾಂಕ 29.06.1983ರಂದು ಉಪ–ನೋಂದಣಾಧಿಕಾರಿ, ಮಂಗಳೂರು ನಗರ, ಮಂಗಳೂರು ಇಲ್ಲಿ ದಸ್ತಾವೇಜು

ಸಂ.189/83–84 ಎಂದು ಕ್ರಯಪತ್ರವೊಂದು ನೋಂದಣಿಯಾಗಿರುವುದು ಇವರಿಗೆ ತಿಳಿದುಬಂದಿರುತ್ತದೆ. ಪ್ರತಿವಾದಿ ಸಂ.3 ರಿಂದ 9, 11, 13 ಮತ್ತು 14ರವರುಗಳು ಮೇಲೆ ಹೇಳಿರುವ ಆಪಾದನೆಗೆ ಗುರಿಯಾಗಿರುವ ಕ್ರಯಪತ್ರಕ್ಕೆ ಪಕ್ಷಕಾರರಾಗಿರುತ್ತಾರೆ. ಪ್ರತಿವಾದಿ ಸಂಖ್ಯೆ 2, 10 ಮತ್ತು 12 ರವರುಗಳು ಮೇಲೆ ಹೇಳಿರುವ ಆಪಾದನೆಗೆ ಗುರಿಯಾಗಿರುವ ಕ್ರಯಪತ್ರದ ಇತರೆ ಪಕ್ಷಕಾರರ ಕಾನೂನು ಸಮ್ಮತ ವಾರಸುದಾರರಾಗಿರುತ್ತಾರೆ. ವಾದಿಯು ಸದರಿ ಕ್ರಯಪತ್ರದ ದಿನಾಂಕದಂದು ಅಪ್ರಾಪ್ತನಾಗಿರುತ್ತಾನೆ. ಈತ ದಾವಾ ಸ್ವತ್ತಿನಲ್ಲಿನ ತನ್ನ ಪಾಲನ್ನು ಮೊದಲ ಪ್ರತಿವಾದಿಗಾಗಲೀ ಅಥವಾ ಯಾರೇ ಇತರರಿಗಾಗಲೀ ಮಾರಾಟ ಮಾಡಿರುವುದಿಲ್ಲ. ಕ್ರಯಪತ್ರದಲ್ಲಿ, ವಾದಿಯ ತಾಯಿ ಶ್ರೀಮತಿ ಸುಚಿತ್ರ ಪೂಂಜರವರು ಕಾರ್ಯರೂಪಕ್ಕೆ ತಂದಿದ್ದಾರೆಂದು ಹೇಳಲಾಗುವ ಸಾಮಾನ್ಯ ಮುಖ್ತ್ಯಾರನಾಮೆಯ ಬಲದಿಂದ ವಾದಿಯ ಅಜ್ಜಿ ಹೇಮಾವತಿ ಆರ್. ಶೆಟ್ಟಿಯವರು ವಾದಿಯನ್ನು ಪ್ರತಿನಿಧಿಸಿರುತ್ತಾರೆಂದು ಒತ್ತಿ ಹೇಳಲಾಗಿರುತ್ತದೆ. ಯಾವುದೇ ಸಮಯದಲ್ಲೂ ವಾದಿಯಾಗಲೀ ಅಥವಾ ಆತನ ತಾಯಿಯಾಗಲೀ, ದಾವಾ ಅನುಸೂಚಿತ ಸ್ವತ್ತಿನ ಸಂಬಂಧದಲ್ಲಿ ಆಪಾದನೆಗೆ ಗುರಿಯಾಗಿರುವ ಕ್ರಯ ಪತ್ರವನ್ನು ಜಾರಿಗೊಳಿಸಲು ಹೇಮಾವತಿ ಆರ್.ಶೆಟ್ಟಿ – ವಾದಿಯ ಅಜ್ಜಿಯನ್ನು ಯಾವುದೇ ಮುಖ್ತ್ಯಾರನಾಮೆಯನ್ನು ಜಾರಿಗೊಳಿಸಲು ಹಕ್ಕುಳ್ಳವರನ್ನಾಗಿಸಿರುವುದಿಲ್ಲ. ಆಪಾದನೆಗೆ ಗುರಿಯಾಗಿರುವ ಕ್ರಯಪತ್ರವು ವಾದಿಯ ಯಾವುದೇ ಕಾನೂನು ಅವಶ್ಯಕತೆಗೆ ಸಂಬಂಧಿಸಿರುವುದಿಲ್ಲ. ವಾದಿಯು ಮೇಲೆ ಹೇಳಿದ ರಿಕ್ತ ದಸ್ತಾವೇಜಿನಡಿಯಲ್ಲಿ ಯಾವುದೇ ಪರಿಗಣನೆಯನ್ನು ಸ್ವೀಕರಿಸಿರುವುದಿಲ್ಲ. ಅನುಸೂಚಿತ ಸ್ವತ್ತಿನಲ್ಲಿ ವಾದಿಯ ಪಾಲನ್ನು ಮಾರಾಟ ಮಾಡಲು ನ್ಯಾಯಾಲಯದಿಂದ ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲ. ವಾದಿಯ ಅವಿಭಜಿತ ಹಕ್ಕಿನ ಮಟ್ಟಿಗೆ ವಾದಪತ್ರದಲ್ಲಿನ ಅನುಸೂಚಿತ ಸ್ವತ್ತುಗಳ ಸಂಬಂಧದಲ್ಲಿನ ಸ್ವಾಮ್ಯವನ್ನು ಮೊದಲ ಪ್ರತಿವಾದಿಯ ಹೆಸರಿಗೆ ಹಸ್ತಾಂತರಿಸಿರುವುದಿಲ್ಲ. ಆರೋಪಕ್ಕೆ ಗುರಿಯಾಗಿರುವ ಕ್ರಯಪತ್ರದಲ್ಲಿನ ಒಕ್ಕಣೆಗಳು ಸಂಪೂರ್ಣವಾಗಿ ಸುಳ್ಳಿನವಾಗಿವೆ. ಕ್ರಯ ಪತ್ರವು ವಾದಿಗೆ ಬಂಧನಕಾರಿಯಾಗಿರುವುದಿಲ್ಲ ಮತ್ತು ತನ್ನ ಅವಿಭಜಿತ ಹಕ್ಕಿನ ಮಟ್ಟಿಗೆ ಇದನ್ನು ನಿರ್ಲಕ್ಷಿಸಲು ಇವರು ಹಕ್ಕುಳ್ಳವರಾಗಿರುತ್ತಾರೆ. ವಾದಿಯು ದಾವಾ ಅನುಸೂಚಿತ ಸ್ವತ್ತಿನ ಜಂಟಿ ಮತ್ತು ಭಾವಿತ ಸ್ವಾಧೀನವನ್ನು ಹೊಂದಿದ್ದು, ಅದರ

ಅನುಭೋಗದಲ್ಲಿರುತ್ತಾರೆ. ಅಂತಿಮವಾಗಿ, ಮೊದಲ ಪ್ರತಿವಾದಿಗಳು, ಇತರೆ ಸಹ ಪಾಲುದಾರರ ಅವಿಭಜಿತ ಹಕ್ಕಿನ ಸ್ವತ್ತನ್ನು ಕಬಳಿಸಲು ಪ್ರಯತ್ನಿಸಿರುತ್ತಾರೆ. ದಾವಾ ಅನುಸೂಚಿತ ಸ್ವತ್ತು ಒಂದು ಕೃಷಿ ಸ್ವತ್ತಾಗಿದ್ದು, ರಾಜಸ್ವ ದಾಖಲೆಗಳು ಮತ್ತು ಇತರೆ ದಾಖಲೆಗಳಲ್ಲೂ ಕೂಡ, ಇದನ್ನು ಕೃಷಿ ಜಮೀನೆಂದೇ ತೋರಿಸಲಾಗಿರುತ್ತದೆ. ಮೊದಲ ಪ್ರತಿವಾದಿಯನ್ನು ದಾವಾ ಅನುಸೂಚಿತ ಸ್ವತ್ತನ್ನು ಖರೀದಿಸುವುದರಿಂದ ನಿಷೇಧಿಸಲಾಗಿರುತ್ತದೆ. ಕರ್ನಾಟಕ ಭೂ ದಾಖಲೆಗಳ ಅಧಿನಿಯಮದ ಉಪಬಂಧಗಳಡಿಯಲ್ಲಿ ಮೊದಲ ಪ್ರತಿವಾದಿಯನ್ನು, ಕೃಷಿ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವುದರಿಂದ ನಿಷೇಧಿಸಲಾಗಿರುತ್ತದೆ. ಆದ್ದರಿಂದ, ಆಪಾದನೆಗೆ ಗುರಿಯಾಗಿರುವ ಕ್ರಯಪತ್ರವು ಶೂನ್ಯ ಮತ್ತು ರಿಕ್ತ, ಕಾನೂನು ಬಾಹಿರ, ಜಾರಿ ಮಾಡಲು ಸಾಧ್ಯವಾಗದ ಮತ್ತು ಶೂನ್ಯವಾದುದಾಗಿರುತ್ತದೆ. ಆಪಾದನೆಗೆ ಗುರಿಯಾಗಿರುವ ಕ್ರಯಪತ್ರದ ವ್ಯವಹರಣೆಯು 2007ರ ಏಪ್ರಿಲ್‌ನಲ್ಲಿ ವಾದಿಯ ಗಮನಕ್ಕೆ ಬಂದಿರುವುದರಿಂದ, ದಾವೆಯನ್ನು ಕಾಲಪರಿಮಿತಿಯ ಅವಧಿಯೊಳಗೆ ಸಲ್ಲಿಸಲಾಗಿರುತ್ತದೆ. ಹಾಗಾಗಿ, ದಾವೆಯು ಸಕಾಲಿಕವಾದುದಾಗಿದೆ. ಆದ್ದರಿಂದ, ವಾದಿಯು ಮೇಲೆ ಹೇಳಿದ ಪರಿಹಾರಗಳನ್ನು ಕೋರಿರುತ್ತಾರೆ.

6. ಮೊದಲ ಪ್ರತಿವಾದಿಯು, ಸಮನ್ಸ್ ಅನ್ನು ಪಡೆದ ನಂತರ, ನ್ಯಾಯಾಲಯಕ್ಕೆ ಹಾಜರಾಗಿ, ವಾದಿಯ ಕ್ಲೇಮನ್ನು ಪ್ರಶ್ನಿಸಿ ವಿವರಣಾತ್ಮಕ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಇವರು ದಾವೆಯು ಹುಡುಗಾಟತನದಿಂದ ಮತ್ತು ತೊಂದರೆ ಕೊಡುವ ಉದ್ದೇಶದಿಂದ ಕೂಡಿದ್ದು, ದಾವೆಯನ್ನು ಜಗದೀಶ್ ಪೂಂಜ ಸಲ್ಲಿಸದೆ, ಸ್ವತ್ತಿನೊಂದಿಗೆ ಯಾವುದೇ ರೀತಿಯ ಸಂಬಂಧವನ್ನು ಹೊಂದಿರದಂಥ ಮೂರನೇ ವ್ಯಕ್ತಿಯು ಅಧಿಭೋಗವನ್ನು ಕ್ಲೇಮು ಮಾಡಿರುತ್ತಾನೆ. ಇದಕ್ಕೆಲ್ಲಾ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಮಂಗಳೂರಿನಲ್ಲಿ ಹೆಚ್ಚಿರುವುದೇ ಕಾರಣವಾಗಿರುತ್ತದೆ ಮತ್ತು ದಾವೆಯನ್ನು ಹೂಡಲು ಜಗದೀಶ ಪೂಂಜ ಹೆಸರನ್ನು ಬಳಸಿಕೊಂಡಂಥ ವ್ಯಕ್ತಿಯೊಂದಿಗೆ ಇತರೆ ಪ್ರತಿವಾದಿಗಳು ಸ್ಪಷ್ಟವಾಗಿ ಷಾಮೀಲಾಗಿರುತ್ತಾರೆಂದೂ ವಾದಿಸಿರುತ್ತಾರೆ. ಜಗದೀಶ್ ಪೂಂಜರವರು ಕೆ. ರಾಜರಾಮ್‌ಶೆಟ್ಟಿರವರಿಗೆ ಮಾಡಿಕೊಟ್ಟಿರುವ ಮುಖ್ತ್ಯಾರನಾಮೆಯು ಸಂಪೂರ್ಣವಾಗಿ ಸುಳ್ಳು ಸೃಷ್ಠನೆಯಾಗಿರುತ್ತದೆ. ವಾದ ಪತ್ರದ ಸಹಿ ಮತ್ತು ದಾವೆಯ ಆರಂಭ ಎರಡೂ

ಶೂನ್ಯ ಮತ್ತು ರಿಕ್ತವಾದುದಾಗಿರುತ್ತದೆ. ಮೊದಲ ಪ್ರತಿವಾದಿಯ ಹೆಸರಿನಲ್ಲಿನ 29.06.1983ನೇ ದಿನಾಂಕದ ಕ್ರಯಪತ್ರವನ್ನು ಒಪ್ಪಿಕೊಳ್ಳುವುದನ್ನು ಹೊರತುಪಡಿಸಿದ, 1 ರಿಂದ 5ರ ವರೆಗಿನ ಪ್ಯಾರಾಗಳಲ್ಲಿನ ವಾದದಲ್ಲಿ ಯಾವುದೇ ಇತರ ದೃಢೋಕ್ತಿಗಳನ್ನು ಇವರು ಒಪ್ಪಿಕೊಂಡಿರುವುದಿಲ್ಲ. ದಾವೆಗೆ ಯಾವುದೇ ವ್ಯಾಜ್ಯ ಕಾರಣವಿರುವುದಿಲ್ಲ. ದಾವೆಯನ್ನು ಕಾಲಪರಿಮಿತಿಯ ಕಾನೂನಿನಿಂದ ನಿರಾಶಾದಾಯಕವಾಗಿ ನಿರ್ಬಂಧಿಸಲಾಗಿರುತ್ತದೆ. ವಾದಿಸಲಾದಂತೆ, ವಾದಿಯು 05.07.1980ರಂದು ಜನಿಸಿರುತ್ತಾರೆಂಬುದನ್ನು ಭಾವಿಸಲಾಗಿದೆಯೇ ಹೊರತು ಒಪ್ಪಿಕೊಂಡಿರುವುದಿಲ್ಲ. ಇವರು 05.07.1998ರಂದು ವಯಸ್ಕ ವಯೋಮಾನದವರಾಗಿರುತ್ತಾರೆ. ಆ ದಿನಾಂಕದಿಂದ ಮೂರು ವರ್ಷಗಳ ಒಳಗೆ, ವಾದಿಯು ದಾವೆಯನ್ನು ಹೂಡಿರುವುದಿಲ್ಲ. ಆದ್ದರಿಂದ ಇದರಿಂದ, ದಾವೆಯನ್ನು ಕಾಲ ಪರಿಮಿತಿಯ ಕಾನೂನಿನಿಂದ ಸ್ಪಷ್ಟವಾಗಿ ನಿಷೇದಿಸಲಾಗಿರುತ್ತದೆ. ಕಾಲಪರಿಮಿತಿಯ ಅಧಿನಿಯಮದ 8ನೇ ಪ್ರಕರಣವು ಈ ಸಂಬಂಧದಲ್ಲಿನ ವಸ್ತುಸ್ಥಿತಿಯನ್ನು ಸ್ಪಷ್ಟವಾಗಿ ರೂಪಿಸಿರುತ್ತದೆ. ದಾವೆಯು ಸಕಾಲಿಕವಾಗಿರುತ್ತದೆಂಬ 5ನೇ ಪ್ಯಾರಾದಲ್ಲಿನಲ್ಲಿನ ವ್ಯಕ್ತ ಹೇಳಿಕೆಯನ್ನು ಹೊರತುಪಡಿಸಿ, ದಾವೆಯು ಹೇಗೆ ಕಾಲಮಿತಿಯೊಳಗಿದೆಯೆಂಬುದನ್ನು ತೋರಿಸಲು ವಾದಪತ್ರವು ಯಾವುದೇ ಸಿಂಧುವಾದ ದೃಢೋಕ್ತಿಗಳನ್ನು ಒಳಗೊಂಡಿರುವುದಿಲ್ಲವೆಂಬುದು ಮಹತ್ವಪೂರ್ಣವಾಗಿರುತ್ತದೆ. ಏಪ್ರಿಲ್ 2007ರಲ್ಲಿ ಕ್ರಯಪತ್ರದ ಬಗ್ಗೆ ತಿಳಿದುಬಂದಿತೆಂಬ ವಾದಿಯ ವಾದವು ಸುಳ್ಳಿನದಾಗಿದ್ದು, ಮಾರಾಟಗಾರನಂತೆ ಈತನನ್ನು ತೋರಿಸಿರುವಾಗ ಇದು ಸಮುಚಿತವಾಗಿರುವುದಿಲ್ಲ. ಪೋಷಕರಿಂದ ಮಾಡಲಾದ ಮಾರಾಟ ಶೂನ್ಯವಾಗಿರದೆ, ಶೂನ್ಯವಾಗ ಬಹುದಾಗಿರುತ್ತದೆ. ಹಾಗಾಗಿ, ತಿಳಿವಳಿಕೆಯ ಪ್ರಶ್ನೆ ಸಮುಚಿತವಾಗಿರುವುದಿಲ್ಲ. ಮುಂದುವರೆದು, ವಾದಿಯು ಕಾರ್ಯತತ್ಪರತೆಯನ್ನು ಚಲಾಯಿಸಿದಲ್ಲಿ, ವಾದಿಯು ವ್ಯವಹರಣೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಘೋಷಣಾತ್ಮಕ ಡಿಕ್ರಿಯು, ಇಷ್ಟು ದೀರ್ಘಕಾಲ ವ್ಯರ್ಥವಾದ ತರುವಾಯವಾಗಲೀ ಇಲ್ಲವೇ ಪಾಲನ್ನು ಕೋರಿದ ತರುವಾಯವಾಗಲೀ ಕ್ಲೇಮು ಮಾಡಲಾಗುವುದಿಲ್ಲ. ವಾದಿಯನ್ನು, ಕ್ರಯಪತ್ರವನ್ನು ರೂಪಿಸಿರುವ ದಿನಾಂಕದಿಂದ ಮತ್ತು ಪಹಣಿಯಲ್ಲಿ, ರಾಜಸ್ವದಲ್ಲಿ ಹಕ್ಕು ಬದಲಾವಣೆ ಮಾಡಿರುವ ದಿನಾಂಕದಿಂದ ಸ್ವತ್ತಿನಿಂದ ಹೊರತುಪಡಿಸಲಾಗಿರುತ್ತದೆ. ವಾದಿಯು

1/17ರಷ್ಟು ಪಾಲಿಗೆ ಅಥವಾ ಕ್ಲೇಮು ಮಾಡಲಾದ ಪಾಲಿನ ಯಾವುದೇ ಪರಿಮಾಣಕ್ಕೆ ಹಕ್ಕುಳ್ಳವನಾಗಿರುತ್ತಾನೆಂಬುದನ್ನು ನಿರಾಕರಿಸಲಾಗಿರುತ್ತದೆ. ಕ್ರಯಪತ್ರವು, ಮೋಸದ ಇಲ್ಲವೆ ಒಳಸಂಚಿನದಾಗಿರುತ್ತದೆಂಬ ಆರೋಪವು ನಿಜವಾದುದಾಗಿರುವುದಿಲ್ಲ. ವಾದಿಯು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ, ಪ್ರಸ್ತುತ ದಾವಾ ಸ್ವತ್ತಿನಲ್ಲಂತು ಅವಿಭಜಿತ ಹಕ್ಕನ್ನು ಹೊಂದಿರುವುದೇ ಇಲ್ಲ. ಕ್ರಯಪತ್ರದ ದಿನಾಂಕದಂದು ವಾದಿಯು ಅಪ್ರಾಪ್ತ ವಯಸ್ಕನಾಗಿದ್ದಿರಬಹುದು. ಆದರೆ, ವಾದಿಯ ತಾಯಿಯಾಗಿರುವಂಥ ಎಂಟನೇ ಪ್ರತಿವಾದಿ – ಸುಚಿತ್ರ ಪೂಂಜ, ಆತನ ಹಿತಾಸಕ್ತಿಯನ್ನು ಸಂಪೂರ್ಣವಾಗಿ ತಾನೇ ವಹಿಸಿಕೊಂಡಿದ್ದು, ಮಾರಾಟಕ್ಕೆ ಸಂಬಂಧಿಸಿದಂತೆ ಮೌಲ್ಯಯುತವಾದ ಪರಿಗಣನೆಯನ್ನು ಸ್ವೀಕರಿಸಿರುತ್ತಾರೆ. ಕೃಷಿ ಕಾರ್ಮಿಕರ ಅಲಭ್ಯತೆ ಮತ್ತು ಹೆಚ್ಚಿನ ವೆಚ್ಚದಾಯಕ ಕೆಲಸವಾಗಿದ್ದು, ಕೃಷಿಯನ್ನು ಮಾಡುವುದು ತುಂಬಾ ಕಷ್ಟದಾಯಕವೆಂದು ಪರಿಗಣಿಸಿ, ಕುಟುಂಬದ ಸದಸ್ಯರು ಕೃಷಿಯನ್ನು ನೆಚ್ಚಿಕೊಂಡು ಸಾಗುವುದಿಲ್ಲವೆಂಬುದನ್ನು ಕುಟುಂಬವು ಮನಗಂಡಿರುತ್ತದೆ. ಈತ ಪ್ರತೀ ಸೆಂಟಿಗೆ 6000/–ರೂ.ಗಳನ್ನು ಸಂದಾಯ ಮಾಡಿದ್ದು, ಅದು ಆ ಸಮಯದಲ್ಲಿ ಉತ್ತಮ ಮೌಲ್ಯವೇ ಆಗಿರುತ್ತದೆ. ಸ್ವತ್ತಿನ ಪಾಲಿಗೆ ಸಂಬಂಧಿಸಿದಂತೆ ಎಂಟನೇ ಪ್ರತ್ಯರ್ಜಿದಾರರು, ರೂ.1,17,176.46 ರೂ.ಗಳ ಮೊಬಲಗನ್ನು ಸ್ವೀಕರಿಸಿರುತ್ತಾರೆ ಮತ್ತು ಅಪ್ರಾಪ್ತ ವಯಸ್ಕನಾಗಿದ್ದು, ಪ್ರಸ್ತುತ ವಾದಿಗೆ ಸಂಬಂಧಿಸಿದಂತೆ, ರೂ.58,588.26ಪೈಸೆಯ ಆತನ ಪಾಲನ್ನು, ಹದಿನೈದು ವರ್ಷಗಳ ತರುವಾಯ ಆತನು ವಯಸ್ಕನಾದ ಮೇಲೆ ಸಂದಾಯ ಮಾಡಲು, ಠೇವಣಿ ಸಂ.198/83ರ ನಿಶ್ಚಿತ ಠೇವಣಿಯಲ್ಲಿ, ಕರ್ನಾಟಕ ಬ್ಯಾಂಕ್ ಲಿ. ಬೋಲಾರ್, ಮಂಗಳೂರು ಇದರ ಹೆಸರಿನಲ್ಲಿ ಠೇವಣಿ ಇಡಲಾಗಿರುತ್ತದೆ. ಮೂಲ ನಿಶ್ಚಿತ ಠೇವಣಿಯ ರಸೀದಿಯನ್ನು, ವಾದಿಯ ಪೋಷಕರಾದಂಥ ಎಂಟನೇ ಪ್ರತಿವಾದಿಗೆ ಹಸ್ತಾಂತರಿಸಲಾಗಿರುತ್ತದೆ. ವಾದಿಯು ಸದರಿ ರಸೀದಿಯನ್ನು ನಗದನ್ನಾಗಿಸಿಕೊಂಡು, ಕ್ರಯದ ಸರಿತನವನ್ನು ವಿವಾದಗೊಳಿಸಿ, ಮೋಸ ಮುಂತಾದ ಹೆಸರುಗಳಿಂದ ಕರೆದು ಈಗ ತೊಂದರೆ ನೀಡುತ್ತಿದ್ದಾರೆ. ಕ್ರಯವು ಕಾನೂನು ಬದ್ಧವಾಗಿದ್ದು, ವಾದಿಯ ಮೇಲೂ ಬಂಧನಕಾರಿಯಾಗಿರುತ್ತದೆ. ವಾದಿಯೂ ಸಹ ಪರಿಗಣನೆಯನ್ನು ಸ್ವೀಕರಿಸಿರುತ್ತಾನೆ. ಅಪ್ರಾಪ್ತ ವಾದಿಯ ಪೋಷಕರಂತೆ ತಾಯಿ ಮತ್ತು ಅಜ್ಜಿ ಇದ್ದುದರಿಂದ ನ್ಯಾಯಾಲಯದ ಅನುಮತಿಯ ಅವಶ್ಯಕತೆ ಇರುವುದಿಲ್ಲ.

ಇದು ಕಾನೂನಿನಲ್ಲಿ ಅನುಮತೀಯವಾಗಿರುತ್ತದೆ. ಆದ್ದರಿಂದ ಇವರು ದಾವೆಯನ್ನು ವಜಾಗೊಳಿಸಲು ಕೋರಿರುತ್ತಾರೆ.

7. ಹದಿನಾಲ್ಕನೆ ಪ್ರತ್ಯರ್ಜಿದಾರರು ಡಿಕ್ರಿಯನ್ನು ಪ್ರಶ್ನಿಸಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಇತರೆ ಪ್ರತ್ಯರ್ಜಿದಾರರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

8. ಮೇಲಿನ ವಾದಗಳ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿರುತ್ತದೆ:

1. *ಉಪ–ನೋಂದಣಾಧಿಕಾರಿ, ಮಂಗಳೂರು ನಗರ, ಮಂಗಳೂರು ಇಲ್ಲಿನ ಕಚೇರಿಯಲ್ಲಿ ದಸ್ತಾವೇಜು ಸಂ.189/83–84 ಎಂದು ನೋಂದಾಯಿಸಲಾದ 29.06.1983ನೇ ದಿನಾಂಕದ ಕ್ರಯಪತ್ರವು ಮೋಸಯುತವಾದುದು ಮತ್ತು ಶೂನ್ಯವಾದ ದಸ್ತಾವೇಜೆಂದು ವಾದಿಯು ರುಜುವಾತುಪಡಿಸಿರುತ್ತಾನೆಯೇ?*

2. *ದಾವಾ ಅನುಸೂಚಿ ಸ್ವತ್ತಿನ ಸಂಬಂಧದಲ್ಲಿ ಕ್ರಯಪತ್ರವನ್ನು ಜಾರಿಗೊಳಿಸಲು, ಯಾವುದೇ ಸಮಯದಲ್ಲಿ ವಾದಿ ಅಥವಾ ಅವರ ತಾಯಿ, ಹೇಮಾವತಿ, ಆರ್. ಶೆಟ್ಟಿಯವರಿಗೆ ಮುಖ್ತ್ಯಾರನಾಮೆಯನ್ನು ಮಾಡಿಕೊಟ್ಟಿಲ್ಲವೆಂಬುದನ್ನು ವಾದಿಯು ರುಜುವಾತುಪಡಿಸಿರುತ್ತಾನೆಯೇ?*

3. *ವಾದಿಯು, ವಾದಪತ್ರದ 3 ಮತ್ತು 4ನೇ ಪ್ಯಾರಾಗಳಲ್ಲಿ ಒತ್ತಿ ಹೇಳಿದಂತೆ, 29.06.1983ನೇ ದಿನಾಂಕದ ಕ್ರಯಪತ್ರವು ಕಾನೂನುಬಾಹಿರವಾಗಿದೆ, ಜಾರಿ ಮಾಡಲು ಯೋಗ್ಯವಾಗಿರುವುದಿಲ್ಲ ಮತ್ತು ವಾದಿಯ ಮೇಲೆ ಬಂಧನಕಾರಿಯಾಗಿಲ್ಲವೆಂಬುದನ್ನು ವಾದಿಯು ರುಜುವಾತುಪಡಿಸಿರುತ್ತಾನೆಯೇ?*

*4. ವಾದಿಯು ವ್ಯಾಜ್ಯ ಕಾರಣವನ್ನು ರುಜುವಾತುಪಡಿಸಿರುತ್ತಾನೆಯೇ?*

*5. ವಾದಿಯು ಅನುಸೂಚಿತ ಸ್ವತ್ತಿನ ಸಹ-ಪಾಲುದಾರ/ ಸಹ-ಮಾಲೀಕನಾಗಿರುತ್ತಾನೆಂದು ಹಾಗೂ ತಾನು ಜಂಟಿ ಮತ್ತು ಭಾವಿತ ಅಧಿಭೋಗದಲ್ಲಿರುವುದನ್ನು ಮತ್ತು ಇದರ ಅನುಭೋಗವನ್ನು ಹೊಂದಿರುವುದನ್ನು ರುಜುವಾತುಪಡಿಸಿರುತ್ತಾನೆಯೇ?*

*6. ಪ್ರತಿವಾದಿ ಸಂ.1, ವಾದಪತ್ರಕ್ಕೆ ಸಹಿ ಮಾಡಿರುವುದು ಮತ್ತು ದಾವೆಯನ್ನು ಆರಂಭ ಮಾಡಿರುವುದು ಎರಡೂ ಶೂನ್ಯ ಮತ್ತು ರಿಕ್ತವೆಂದು ರುಜುವಾತುಪಡಿಸಿರುತ್ತಾನೆಯೇ?*

*7. ಪ್ರತಿವಾದಿ ಸಂ.1, ತನ್ನ ಲಿಖಿತ ಹೇಳಿಕೆಯ 4ನೇ ಪ್ಯಾರಾದಲ್ಲಿ ಒತ್ತಿಹೇಳಿದಂತೆ ಪರಿಮಿತಿಯ ಮೂಲಕ ದಾವೆಯನ್ನು ನಿರಾಶಾದಾಯಕವಾಗಿ ನಿಷೇಧಿಸಲಾಗಿದೆಯೆಂಬುದನ್ನು ರುಜುವಾತುಪಡಿಸಿರುತ್ತಾನೆಯೇ?*

*8. ವಾದಿಯು, ಕೋರಿರುವಂಥ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆಯೇ?*

*9. ಹಾಗಿದ್ದರೆ ಯಾವ ಆಜ್ಞೆ ಅಥವಾ ಡಿಕ್ರಿ?*

9. ವಿವಾದಾಂಶಗಳನ್ನು ರೂಪಿಸಿದ ತರುವಾಯ, ನ್ಯಾಯಾಲಯವು, ವಿವಾದಾಂಶ ಸಂಖ್ಯೆ 7ನ್ನು ಪ್ರಾಥಮಿಕ ವಿವಾದವೆಂದು ಪರಿಗಣಿಸಲು ಸೂಚಿಸಿರುತ್ತದೆ. ಪ್ರತಿವಾದಿ ಸಂ.1, ದಾವೆಯನ್ನು ಕಾಲಪರಿಮಿತಿಯ ಮೂಲಕ ನಿಷೇಧಿಸಲಾಗಿದೆಯೆಂಬ ಆಧಾರದ ಮೇಲೆ ವಾದಪತ್ರವನ್ನು ತಿರಸ್ಕರಿಸುವುದಕ್ಕೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತದೆ.

10. ಪ್ರಾಥಮಿಕ ವಿವಾದಾಂಶ ಮತ್ತು ವಾದಪತ್ರದ ತಿರಸ್ಕರಣೆಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿ ಸಲ್ಲಿಸಿರುವ ಅರ್ಜಿ ಇವೆರಡನ್ನೂ ಪರಿಗಣನೆಗಾಗಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಪಕ್ಷಕಾರರ ಮಾನ್ಯ ವಕೀಲರು ಅವರ ವಾದಗಳನ್ನು ಮಂಡಿಸಿ, ಅದಕ್ಕೆ ಪೂರಕವಾಗಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನಲ್ಲಿ ಉದ್ಧರಿಸಿರುವಂಥ ಹಲವಾರು ತೀರ್ಪುಗಳನ್ನು ಉದಾಹರಿಸಿರುತ್ತಾರೆ.

11. ವಾದಿಯು, ಕಾಲ ಪರಿಮಿತಿಗೆ ಸಂಬಂಧಿಸಿದ ಪ್ರಾಥಮಿಕ ವಿವಾದಾಂಶದ ಮೇಲಿನ ಮುಖ್ಯವಾದ ಸಾಕ್ಷ್ಯವನ್ನು ಹಾಜರುಪಡಿಸಲು ಅನುಮತಿಗೆ ಸಂಬಂಧಿಸಿದ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಅದನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಲಾಗಿರುತ್ತದೆ.

12. ಪ್ರಕರಣದಲ್ಲಿನ ವಾದ ವಿವಾದಗಳನ್ನು ಆಲಿಸಿದ ತರುವಾಯ ಅಧಿವಿಚಾರಣಾ ನ್ಯಾಯಾಲಯವು, ಹಾಜರುಪಡಿಸಿದ ದಸ್ತಾವೇಜುಗಳು ಮತ್ತು ಆಧರಿಸಲಾದ ವಿವಿಧ ತೀರ್ಪುಗಳನ್ನು ಗಮನಿಸಿದ ತರುವಾಯ ಸಾಮಾನ್ಯ ಮುಖ್ತ್ಯಾರನಾಮೆಯನ್ನು ಹಾಜರುಪಡಿಸದಿರುವುದರಿಂದ ಮತ್ತು ವಾದಪತ್ರದಲ್ಲಿ ವಾದಿಯು ಸಹಿ ಮಾಡದಿರುವುದರಿಂದ ವಾದಪತ್ರವು ದೋಷ ಪೂರ್ಣವಾಗಿದೆಯೆಂದು ಅಭಿಪ್ರಾಯಪಡಲಾಗಿರುತ್ತದೆ. ಮುಂದುವರೆದು, ಇದು ವಾದಪತ್ರದ ದೃಢೋಕ್ತಿಗಳನ್ನು ಗಮನಿಸುತ್ತಾ, ದಾವೆಯನ್ನು ಕಾಲಪರಿಮಿತಿಯ ಮೂಲಕ ನಿರಾಶಾದಾಯಕವಾಗಿ ನಿರ್ಬಂಧಿತವಾಗಿರುತ್ತದೆ. ಅಲ್ಲದೆ ವಾದಪತ್ರವು ವ್ಯಾಜ್ಯ ಕಾರಣವನ್ನು ಬಹಿರಂಗಪಡಿಸಿರುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತದೆ. ತದನುಸಾರವಾಗಿ, 7ನೇ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಅಭಿಪ್ರಾಯಪಟ್ಟಿದ್ದು, ದಾವೆಯನ್ನು ಕಾಲಪರಿಮಿತಿಯ ಕಾನೂನಿನಿಂದ ನಿಷೇಧಿಸಿದೆ ಮತ್ತು ವಾದಪತ್ರದ ತಿರಸ್ಕರಣೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಅಂಗೀಕರಿಸಿದ್ದು, ಪ್ರಕರಣವನ್ನು ಹೊಸದಾಗಿ ಆರಂಭಿಸುವುದಕ್ಕೆ ಮತ್ತು ಕಾಲಪರಿಮಿತಿಯ ಅಂಶದ ಮೇಲೆ ಸಾಕ್ಷ್ಯವನ್ನು ಮತ್ತಷ್ಟು ನೀಡುವುದಕ್ಕೆ ಸಂಬಂಧಿಸಿದಂತೆ ವಾದಿಯು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದೆ.

13. ಸದರಿ ಆದೇಶದಿಂದ ಬಾಧಿತರಾದ ವಾದಿಗಳು ಅಪೀಲು ಸಲ್ಲಿಸಿರುತ್ತಾರೆ.

14. ಅಪೀಲುದಾರನ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳಾದ **ಶ್ರೀ ಕೆ.ಎಂ. ನಟರಾಜ್**, ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯನ್ನು ನಿರಾಕರಿಸಿ, ಕಾಲಪರಿಮಿತಿಯ ಪ್ರಶ್ನೆಯು ಕಾನೂನಿನ ಮತ್ತು ವಾಸ್ತವಾಂಶದ ಅಪ್ಪಟ ಸಂಯೋಜಿತ ಪ್ರಶ್ನೆಯಾಗಿರುವಾಗ ಇದನ್ನು ಯಾವುದೇ ಕಾರಣಕ್ಕೂ ಪೂರ್ವಭಾವಿ ವಿವಾದಾಂಶವೆಂದು ಅಧಿವಿಚಾರಿಸಲಾಗಿರುವುದಿಲ್ಲವೆಂದು ವಾದಿಸಿರುತ್ತಾರೆ. ಮುಂದುವರೆದು, ಇವರು, 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿನ ವಾದದ ತಿರಸ್ಕರಣೆಯನ್ನು ಪರಿಗಣಿಸಿ, ಕಾಣಬೇಕಾದ ಎಲ್ಲಾ ವಿಚಾರಗಳು ವಾದಪತ್ರದಲ್ಲಿರುವ ದೃಢೋಕ್ತಿಗಳಲ್ಲಿದೆ ಎಂದು ವಾದಿಸಿರುತ್ತಾರೆ. ವಾದಪತ್ರದಲ್ಲಿ, ವಾದಿಯು, ದಾವೆಯನ್ನು ಕಾಲಪರಿಮಿತಿಯ ಅವಧಿಯೊಳಗೆ ಸಲ್ಲಿಸಲಾಗಿದೆಯೆಂದು ನಿರ್ದಿಷ್ಟವಾಗಿ ಉಲ್ಲೇಖಿಸಿರುತ್ತಾರೆ. ಹಾಗಾಗಿ, ದಾವೆಯು ಸಕಾಲಿಕವಾಗಿದ್ದು, ಕಾಲಪರಿಮಿತಿಯ ನಿಷೇಧದ ಆಧಾರದ ಮೇಲೆ ವಾದವನ್ನು ತಿರಸ್ಕರಿಸಲಾಗುವುದಿಲ್ಲ. ಕಾಲಪರಿಮಿತಿಗೆ ಸಂಬಂಧಿಸಿದಂತೆ ಪ್ರಾಥಮಿಕ ವಿವಾದಾಂಶವನ್ನು ನಿರ್ಧರಿಸಲು ನ್ಯಾಯಾಲಯವು ಇಚ್ಛಿಸಿದಲ್ಲಿ ಕೂಡ, ಇದು ಕಾನೂನು ಮತ್ತು ವಾಸ್ತವಾಂಶಗಳ ಸಂಯೋಜಿತ ಪ್ರಶ್ನೆಯಾಗಿದ್ದು, ತಪ್ಪಾಗಿ ತಿರಸ್ಕರಿಸಿರುವಂಥ ಸಾಕ್ಷ್ಯವನ್ನು ಮಂಡಿಸಲು, ವಾದಿಯು ಅನುಮತಿಯನ್ನು ಕೋರಿರುತ್ತಾನೆ. ಮುಂದುವರೆದು, ವಾದಪತ್ರವು ದೋಷಪೂರ್ಣವಾಗಿದೆ ಮತ್ತು ವಾದಿಯು ವಾದಪತ್ರದಲ್ಲಿ ಸಹಿ ಮಾಡಿರುವುದಿಲ್ಲ ಮತ್ತು ಮುಖ್ತ್ಯಾರನಾಮೆಧಾರಕನ ಹೆಸರಿನಲ್ಲಿರುವ ಅವನಿಂದ ಬರೆದುಕೊಡಲಾಗಿರುವ ಸಾಮಾನ್ಯ ಮುಖ್ತ್ಯಾರನಾಮೆಯನ್ನು ಹಾಜರುಪಡಿಸಿರುವುದಿಲ್ಲವೆಂಬ ಆಧಾರದ ಮೇಲೆ ವಜಾಗೊಳಿಸಲಾಗಿರುತ್ತದೆ. ಆ ಎಲ್ಲಾ ಆಧಾರಗಳು, ಸಾಕ್ಷ್ಯಗಳನ್ನು ದಾಖಲಿಸದೆ ಮತ್ತು ಸಾಕ್ಷ್ಯವನ್ನು ಮಂಡಿಸುವುದಕ್ಕೆ ವಾದಿಯನ್ನು ಅನುಮತಿಸದೆ, ವಾದಪತ್ರವನ್ನು ತಿರಸ್ಕರಿಸಲಾಗುವುದಿಲ್ಲ ಅಥವಾ ದಾವೆಯನ್ನು ವಜಾಗೊಳಿಸಲಾಗುವುದಿಲ್ಲ ಮತ್ತು ಆದ್ದರಿಂದ, ಯಾವುದೇ ಆಯಾಮದಿಂದ ನೋಡಿದರೂ, ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯು ಊರ್ಜಿತವಾಗಿರುವುದಿಲ್ಲವೆಂದು ಅವರು ನಿವೇದಿಸಿಕೊಂಡಿರುತ್ತಾರೆ. ತದನುಸಾರವಾಗಿ, ತೀರ್ಪು ಮತ್ತು ಡಿಕ್ರಿಯನ್ನು

ರದ್ದುಪಡಿಸಿ, ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ಒಳಗೊಂಡ ಎಲ್ಲಾ ವಿವಾದಾಂಶಗಳನ್ನು ಕುರಿತಂತೆ ದಾವೆಯ ಅಧಿವಿಚಾರಣೆಗೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ವಿಷಯವನ್ನು ಹಿಂದಕ್ಕೆ ಕಳುಹಿಸಬೇಕೆಂದು ಕೋರಿರುತ್ತಾರೆ.

15. ಮೊದಲ ಪ್ರತಿವಾದಿಗೆ ಯುಕ್ತವಾಗಿ, ಸಮನುಗಳನ್ನು ಜಾರಿ ಮಾಡಿದ್ದಾಗ್ಯೂ, ಅವರು ಗೈರುಹಾಜರಾಗಿರುತ್ತಾರೆ. ಎಲ್ಲಾ ಇತರೆ ಪ್ರತ್ಯರ್ಜಿದಾರರೂ ಗೈರುಹಾಜರಾಗಿರುತ್ತಾರೆ. ದಾವೆಯಲ್ಲೂ ಕೂಡ, ಯುಕ್ತವಾಗಿ ಸಮನುಗಳನ್ನು ಜಾರಿಮಾಡಿದ್ದಾಗ್ಯೂ ಅವರು ಗೈರುಹಾಜರಾಗಿರುತ್ತಾರೆ. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯದಲ್ಲಿನ ಹದಿನಾಲ್ಕನೆಯ ಪ್ರತ್ಯರ್ಜಿದಾರರು, ಪ್ರಶ್ನಿತ ಆದೇಶವನ್ನು ಬೆಂಬಲಿಸಿ ವಾದ ಮಂಡಿಸಿದಂಥ ಹಿರಿಯ ವಕೀಲರಾದ **ಶ್ರೀ ಎಸ್. ಶೇಖರ್ ಶೆಟ್ಟಿ**ಯವರ ಮೂಲಕ ಪ್ರತಿನಿಧಿಸಿರುತ್ತಾರೆ.

16. ಮೇಲೆ ಹೇಳಿರುವ ವಾಸ್ತವಾಂಶಗಳು ಮತ್ತು ನಿವೇದನೆಗಳ ಹಿನ್ನೆಲೆಯಲ್ಲಿ, ಈ ಅಪೀಲಿನಲ್ಲಿ ನಮ್ಮ ಪರಿಗಣನೆಗೆ ಸಂಬಂಧಿಸಿದಂತೆ ಉದ್ಭವಿಸಿರುವ ಅಂಶಗಳು ಈ ಮುಂದಿನಂತಿರುತ್ತವೆ:

(ಎ) ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸಬಹುದೆ?

(ಬಿ) ಯಾವುದೇ ದಾವೆಯನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯ 11(ಡಿ) ನಿಯಮದ 7ನೇ ಆದೇಶದಡಿಯಲ್ಲಿ ಕಾಲದಿಂದ ಪ್ರತಿಷೇಧಿತವೆಂದು ವಜಾಗೊಳಿಸಬಹುದೆ?

**ವಿವಾದಾಂಶ (ಎ)**

17. ಸಂಹಿತೆಯ 14ನೇ ಆದೇಶವು, ವಿವಾದಾಂಶಗಳನ್ನು ಗೊತ್ತುಪಡಿಸುವುದು ಮತ್ತು ಕಾನೂನಿನ ವಿವಾದಾಂಶಗಳ ಮೇಲೆ ಅಥವಾ ಒಪ್ಪಿಕೊಂಡ ವಿವಾದಾಂಶಗಳ ಮೇಲೆ ದಾವೆಯನ್ನು ನಿರ್ಧರಿಸುವ ವಿಷಯದೊಂದಿಗೆ ವ್ಯವಹರಿಸುತ್ತದೆ. 14ನೇ ಕ್ರಮಾದೇಶದ (2)ನೇ ನಿಯಮವು, ನ್ಯಾಯಾಲಯವು, ಎಲ್ಲಾ ವಿವಾದಾಂಶಗಳ ಮೇಲೆ ತೀರ್ಪನ್ನು ನೀಡಬೇಕೆಂಬುದನ್ನು ಕಡ್ಡಾಯಗೊಳಿಸಿದೆ. ಅದು, ಈ ಮುಂದಿನಂತಿರುತ್ತದೆ:

> *"2. **ಎಲ್ಲ ವಿವಾದಾಂಶಗಳ ಮೇಲೂ ನ್ಯಾಯಾಲಯವು ತೀರ್ಪನ್ನು ಉಚ್ಚರಿಸತಕ್ಕದ್ದು**: (1) ಪ್ರಾರಂಭಿಕ ವಿವಾದಾಂಶದ ಮೇಲೆ ಮೊಕದ್ದಮೆಯನ್ನು ವಿಲೇ ಮಾಡಬಹುದಾಗಿದ್ದರೂ, (2)ನೇ ಉಪನಿಯಮದ ಉಪಬಂಧಗಳಿಗೆ ಒಳಪಟ್ಟು, ನ್ಯಾಯಾಲಯವು ಎಲ್ಲ ವಿವಾದಾಂಶಗಳ ಮೇಲೂ ತನ್ನ ತೀರ್ಪನ್ನು ಉಚ್ಚರಿಸತಕ್ಕದ್ದು.*
>
> *(2) ಅದೇ ದಾವೆಯಲ್ಲಿ ಕಾನೂನಿನ ವಿವಾದಾಂಶಗಳು ಮತ್ತು ಸಂಗತಿಯ ವಿವಾದಾಂಶಗಳೂ ಉದ್ಭವಿಸಿದ ಮತ್ತು ಆ ಮೊಕದ್ದಮೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಕಾನೂನಿನ ವಿವಾದಾಂಶದ ಮೇಲೆ ಮಾತ್ರ ವಿಲೆ ಮಾಡಬಹುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ, ಆ ವಿವಾದಾಂಶವು, –*
>
> *(ಎ) ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ, ಅಥವಾ*
>
> *(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ದಾವೆಯನ್ನು ಪ್ರತಿಷೇಧಿಸುವುದಕ್ಕೆ,*

> *– ಸಂಬಂಧಿಸಿದ್ದರೆ, ಆ ವಿವಾದಾಂಶವನ್ನು ಅದು ಮೊದಲು ಅಧಿವಿಚಾರಣೆ ಮಾಡಬಹುದು ಮತ್ತು ಆ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಆಲೋಚಿಸಿದರೆ, ಆ ವಿವಾದಾಂಶವು ನಿರ್ಧರಿತವಾಗುವವರೆಗೆ ಇತರ ವಿವಾದಾಂಶಗಳನ್ನು ಗೊತ್ತುಪಡಿಸುವುದನ್ನು ಮುಂದೂಡಬಹುದು ಮತ್ತು ಆ ವಿವಾದಾಂಶದ ತೀರ್ಮಾನಕ್ಕೆ ಅನುಸಾರವಾಗಿ ಆ ದಾವೆಯ ಬಗ್ಗೆ ಕ್ರಮ ಕೈಗೊಳ್ಳಬಹುದು.*

18. ಈ ಉಪಬಂಧವು, ಹಲವಾರು ತೀರ್ಪುಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಎದುರು ಪರಿಗಣನೆಗಾಗಿ ಬಂದಿರುತ್ತದೆ. ಇದರ ಮೊದಲ ತೀರ್ಪಿನಲ್ಲಿ, ***ಮೇಜರ್ ಎಸ್.ಎಸ್.ಖನ್ನಾ –ವಿರುದ್ಧ– ಬ್ರಿಗೇಡಿಯರ್ ಎಫ್.ಜೆ. ದಿಲ್ಲಾನ್*** [1], ಪ್ರಕರಣದಲ್ಲಿನ 18ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

> *"ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 14, ನಿಯಮ 2 ರಡಿಯಲ್ಲಿ, ಅದೇ ದಾವೆಯಲ್ಲಿ ಕಾನೂನಿನ ವಿವಾದಾಂಶಗಳು ಮತ್ತು ಸಂಗತಿಯ ವಿವಾದಾಂಶಗಳೂ ಉದ್ಭವಿಸಿದ ಮತ್ತು ಮೊಕದ್ದಮೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಕಾನೂನಿನ ವಿವಾದಾಂಶದ ಮೇಲೆ ಮಾತ್ರ ವಿಲೆ ಮಾಡಬಹುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ, ಇದು ಮೊದಲು ಅಂಥ ವಿವಾದಾಂಶಗಳನ್ನು ಅಧಿವಿಚಾರಿಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಪರ್ಯಾಲೋಚಿಸಿದರೆ, ಆ ವಿವಾದಾಂಶವು ನಿರ್ಧರಿತವಾಗುವವರೆಗೆ ಇತರ ವಿವಾದಾಂಶಗಳನ್ನು ಗೊತ್ತುಪಡಿಸುವುದನ್ನು*

1. ಎಐಆರ್ 1964 ಎಸ್‌ಸಿ 497

*ಮುಂದೂಡಬಹುದು ವಾಸ್ತವಾಂಶಗಳ ವಿವಾದಾಂಶಗಳ ಜೊತೆಗೆ ಕಾನೂನಿನ ವಿವಾದಾಂಶವನ್ನು ಅಧಿವಿಚಾರಿಸುವ ಅಧಿಕಾರ ವ್ಯಾಪ್ತಿಯನ್ನು, ಪೂರ್ಣ ದಾವೆಯನ್ನು ಕೇವಲ ಕಾನೂನಿನ ವಿವಾದಾಂಶಗಳ ಮೇಲೆ ವಿಲೆ ಮಾಡಬಹುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ ಮಾತ್ರ ಚಲಾಯಿಸಬಹುದು, ಆದರೆ ಸಂಹಿತೆಯು, ಪೂರ್ವಭಾವಿ ವಿವಾದಾಂಶಗಳಂತೆ ಕಾನೂನು ಮತ್ತು ವಾಸ್ತವಾಂಶಗಳ ಸಂಯೋಜಿತ ವಿವಾದಾಂಶಗಳ ಮೇಲೆ ದಾವೆಯನ್ನು ಅಧಿವಿಚಾರಿಸಲು ನ್ಯಾಯಾಲಯಕ್ಕೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಪ್ರದತ್ತಗೊಳಿಸಿರುವುದಿಲ್ಲ. ಸಾಮಾನ್ಯವಾಗಿ, ದಾವೆಯಲ್ಲಿನ ಎಲ್ಲಾ ವಿವಾದಾಂಶಗಳನ್ನು ನ್ಯಾಯಾಲಯುವೇ ಅಧಿವಿಚಾರಿಸಬೇಕು; ಹಾಗೆ ಮಾಡದಿದ್ದಲ್ಲಿ, ವಿಶೇಷವಾಗಿ, ವಾಸ್ತವಾಂಶಗಳ ವಿವಾದಾಂಶಗಳ ತೀರ್ಪಿನ ಮೇಲೆ ಅವಲಂಬಿತವಾಗಿರುವ ಕಾನೂನಿನ ವಿವಾದಾಂಶಗಳ ಮೇಲಿನ ನಿರ್ಧಾರವು, ದಾವೆಯ ಏಕಪಕ್ಷೀಯ ಅಧಿವಿಚಾರಣೆಯಲ್ಲಿನ ಫಲಿತಾಂಶವಾಗಿರುತ್ತದೆ.*

19. 12ನೇ ಪ್ಯಾರಾದಲ್ಲಿ ಮೇಲೆ ಹೇಳಿದ ತೀರ್ಪನ್ನು ಗಮನಿಸಿದ ತರುವಾಯ, ***ರಮೇಶ್ ಬಿ. ದೇಸಾಯಿ ಮತ್ತು ಇತರರು –ವಿರುದ್ಧ– ಬಿಪಿನ್ ವಾಡಿಲಾಲ್ ಮೆಹ್ತಾ ಮತ್ತು ಇತರರು*** [2]**,** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು 12ನೇ ಪ್ಯಾರಾದಲ್ಲಿ ಮೇಲೆ ಹೇಳಿದ ತೀರ್ಪನ್ನು ಗಮನಿಸಿದ ತರುವಾಯ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

*"ತಿದ್ದುಪಡಿ ಅಧಿನಿಯಮ, 1976ರ ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆಯು 2ನೇ ನಿಯಮದ XIVನೇ*

2. ಎಐಆರ್ 2006 ಎಸ್‌ಸಿ 3672

> *ಕ್ರಮಾದೇಶದಲ್ಲಿ ಕ್ವಚಿತ್ತಾಗಿ ತಿದ್ದುಪಡಿ ಮಾಡಿದ್ದು, ಆದರೆ ಮೇಲೆ ಉದ್ಧರಿಸಿದ ತೀರ್ಪಿನಲ್ಲಿ ನಿರೂಪಿತವಾದ ತತ್ವವು ಒಳಿತನ್ನೇ ಹೊಂದಿದ್ದಾಗ್ಯೂ, ಪ್ರಾಥಮಿಕ ವಿವಾದಾಂಶದಂತೆಯೇ ಕಾನೂನು ಮತ್ತು ವಾಸ್ತವಾಂಶಗಳ ಸಂಯೋಜಿತ ವಿವಾದಾಂಶಗಳ ಮೇಲೆ ದಾವೆಯನ್ನು ಅಧಿವಿಚಾರಿಸುವುದಕ್ಕೆ ನ್ಯಾಯಾಲಯದ ಮೇಲೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಸಂಹಿತೆಯು ಪ್ರದತ್ತ ಮಾಡಿಲ್ಲವೆಂಬ ತತ್ತ್ವದಿಂದ ಬೇರೆಯಾಗಿರುವುದಿಲ್ಲ ಮತ್ತು ಕಾನೂನಿನ ವಿವಾದಾಂಶದ ಮೇಲಿನ ತೀರ್ಪು, ವಾಸ್ತವಾಂಶಗಳ ತೀರ್ಪಿನ ಮೇಲೆ ಅವಲಂಬಿಸಿದಾಗ, ಇದನ್ನು ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸಲಾಗುವುದಿಲ್ಲ".*

ಇದೇ ತೀರ್ಪಿನಲ್ಲಿನ 16ನೇ ಪ್ಯಾರಾದಲ್ಲಿ, ಅವರು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ.

> *'ಕಾಲಪರಿಮಿತಿಯ ವಾದವನ್ನು ಪ್ರತಿಯೊಂದು ಪ್ರಕರಣದಲ್ಲೂ ಕಾಲಪರಿಮಿತಿಯ ಆರಂಭಿಕ ಅಂಶವು, ವಾಸ್ತವಾಂಶದ ಇಡೀ ಪ್ರಶ್ನೆಯಾಗಿರುವಂತೆ ಖಚಿತಪಡಿಸಬೇಕಾಗುತ್ತದೆಂಬ ವಾಸ್ತವಾಂಶಗಳಿಂದ ವಿಚ್ಛೇದಿತವಾದ ಕಾನೂನಿನ ಸಂಗ್ರಹಿತ ತತ್ವವಾಗಿರುವಂತೆ ನಿರ್ಣಯಿಸಲಾಗುವುದಿಲ್ಲ. ಕಾಲಪರಿಮಿತಿಯ ವಾದವು ಕಾನೂನು ಮತ್ತು ವಾಸ್ತವಾಂಶದ ಸಂಯೋಜಿತ ಪ್ರಶ್ನೆಯಾಗಿರುತ್ತದೆ".*

20. 14ನೇ ಕ್ರಮಾದೇಶದ 1(4)ನೇ ನಿಯಮವು ಎರಡು ರೀತಿಯ ವಿವಾದಾಂಶಗಳನ್ನು ಉಪಬಂಧಿಸುತ್ತದೆ. (ಎ) ವಾಸ್ತವಾಂಶದ ವಿವಾದಾಂಶಗಳು

(ಬಿ) ಕಾನೂನಿನ ವಿವಾದಾಂಶಗಳು 14ನೇ ಕ್ರಮಾದೇಶದ, 2ನೇ ನಿಯಮವು ಎಲ್ಲಾ ವಿವಾದಾಂಶಗಳ ಮೇಲಿನ ತೀರ್ಪನ್ನು ಉಚ್ಚರಿಸಲು ನ್ಯಾಯಾಲಯಕ್ಕೆ ಉತ್ತರದಾಯಿತ್ವವನ್ನು ರೂಪಿಸುತ್ತದೆ. ಆದರೆ, ಇದು ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಲ್ಲಿ ಅಥವಾ ಸ್ವತಃ ದಾವೆಯನ್ನು ಆರಂಭಿಸಲು ನಿಷೇಧಿಸಿದಲ್ಲಿ ಮಾತ್ರ ಕಾನೂನಿನ ವಿವಾದಾಂಶಗಳನ್ನು ರೂಪಿಸಲು ನ್ಯಾಯಾಲಯಕ್ಕೆ ವಿವೇಚನೆಯನ್ನು ನೀಡುವಂಥ (2)ನೇ ಉಪ-ನಿಯಮದ ಉಪಬಂಧಕ್ಕೆ ಒಳಪಡುತ್ತದೆ. 2ನೇ ನಿಯಮದ 14ನೇ ಕ್ರಮಾದೇಶದ ಪರಿಭಾಷೆಯಿಂದ ವ್ಯಕ್ತವಾಗುವಂಥ ವಿಧಾನಮಂಡಲದ ಉದ್ದೇಶವು, ದಾವೆಯ ವಿಲೆಯನ್ನು ತ್ವರಿತವಾಗಿ ಮಾಡಿ ಮುಗಿಸಬೇಕೆಂಬುದಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ, ದಾವೆಯನ್ನು ಅಂಥ ವಿವಾದಾಂಶದ ಮೇಲೆ ವಿಲೇ ಮಾಡಬೇಕೆಂದು ನ್ಯಾಯಾಲಯವು ಭಾವಿಸಿದಲ್ಲಿ, ಪ್ರಾಥಮಿಕ ವಿವಾದಾಂಶದಂತೆ ಅಧಿಕಾರ ವ್ಯಾಪ್ತಿಯ ವಿವಾದಾಂಶವನ್ನು ರೂಪಿಸಲು ನ್ಯಾಯಾಲಯದ ವಿವೇಚನೆಗೆ ಬಿಟ್ಟುಬಿಡಲಾಗಿರುತ್ತದೆ. 14ನೇ ಕ್ರಮಾದೇಶದ 2ನೇ ನಿಯಮದ (2)ನೇ ಉಪ-ನಿಯಮದ ಪರಿಶೀಲನೆಯು, ಕಾನೂನಿನ ವಿವಾದಾಂಶವನ್ನು ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಅಥವಾ ತತ್ಕಾಲದಲ್ಲಿ ಯಾವುದೇ ಕಾನೂನಿನಿಂದ ಸೃಜಿಸಲಾದ ದಾವೆಯ ನಿಷೇಧಕ್ಕೆ ಸಂಬಂಧಪಡುವ ಉಪಬಂಧಿಸಲಾದ ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸಬಹುದೆಂಬುದನ್ನು ತೋರಿಸುತ್ತದೆ. ಆದ್ದರಿಂದ, ಕಾನೂನಿನ ಎಲ್ಲಾ ವಿವಾದಾಂಶಗಳನ್ನು ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸಲಾಗುವುದಿಲ್ಲ. ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಅಥವಾ ದಾವೆಯ ನಿಷೇಧಕ್ಕೆ ಸಂಬಂಧಿಸಿದ ಕಾನೂನಿನ ವಿವಾದಾಂಶಗಳನ್ನು ಮಾತ್ರ ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸತಕ್ಕದ್ದೇ ಹೊರತು ಬೇರಾವುದೇ ರೀತಿಯಲಲ್ಲ. ಆದಾಗ್ಯೂ, ವಾಸ್ತವಾಂಶದ ಮೇಲಿನ ನಿರ್ಣಯದ ಮೇಲೆ ಕಾನೂನು ಅವಲಂಬಿತವಾಗಿದ್ದಾಗ್ಯೂ, ವಿವಾದಾಂಶಗಳ ಮೇಲಿನ ನಿರ್ಣಯವು, ದಾವೆಯ ಏಕ-ಮುಖ ಅಧಿವಿಚಾರಣೆಯ ಫಲಿತಾಂಶವಾಗುವುದರಿಂದ, ಇದನ್ನು ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸಲಾಗುವುದಿಲ್ಲ. 14ನೇ ಕ್ರಮಾದೇಶದ 1(4)ನೇ ನಿಯಮವು ಕಾನೂನು ಮತ್ತು ವಾಸ್ತವಾಂಶದ ಸಂಯೋಜಿತ ಪ್ರಶ್ನೆ ಕುರಿತಂತೆ ಏನನ್ನೂ ನಮೂದಿಸಿರುವುದಿಲ್ಲ. ಆದ್ದರಿಂದ, 14ನೇ ಕ್ರಮಾದೇಶದ

2ನೇ ನಿಯಮದ (2)ನೇ ಉಪ–ನಿಯಮವು, ಕಾನೂನಿನ ವಿವಾದಾಂಶಗಳನ್ನು ಮಾತ್ರ ಮಿತಿಯಲ್ಲಿಡುತ್ತದೆ. ಇದು ಕಾನೂನು ಮತ್ತು ವಾಸ್ತವಾಂಶಗಳ ಸಂಯೋಜಿತ ಪ್ರಶ್ನೆಯೊಂದಿಗೆ ವ್ಯವಹರಿಸುವುದಿಲ್ಲ. ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಪ್ರಶ್ನೆಯು ಕೇವಲ ಕಾನೂನಿನ ಪ್ರಶ್ನೆಯಾಗಿ ಉಳಿಯಬಹುದು ಅಥವಾ ಕಾನೂನು ಮತ್ತು ವಾಸ್ತವಾಂಶದ ಸಂಯೋಜಿತ, ಪ್ರಶ್ನೆಯಾಗಿ ಉಳಿಯಬಹುದು.

21. ಕಾಲಪರಿಮಿತಿಯು ಪ್ರಶ್ನೆಯು, ಸಾಮಾನ್ಯವಾಗಿ ಕಾನೂನು ಮತ್ತು ವಾಸ್ತವಾಂಶದ ಸಂಯೋಜಿತ ಪ್ರಶ್ನೆಯಾಗಿರುತ್ತದೆ. ಕಾಲಪರಿಮಿತಿಯ ವಾದವನ್ನು ಪ್ರತಿಯೊಂದು ಪ್ರಕರಣದಲ್ಲೂ, ಕಾಲಪರಿಮಿತಿಯ ಆರಂಭಿಕ ಅಂಶವನ್ನು, ಸಂಪೂರ್ಣವಾಗಿ ವಾಸ್ತವಾಂಶದ ಪ್ರಶ್ನೆಯಾಗಿರುವುದೆಂದು ಖಚಿತಪಡಿಸಬೇಕಾಗಿರುವುದರಿಂದ, ವಾಸ್ತವಾಂಶಗಳಿಂದ ಪ್ರತ್ಯೇಕಿತವಾದ ಕಾನೂನಿನ ಸಂಕ್ಷಿಪ್ತ ತತ್ವದಂತೆ ನಿರ್ಣಯಿಸಲಾಗುವುದಿಲ್ಲ. ಆದ್ದರಿಂದ, ಪ್ರಸ್ತುತ, ಕಾಲಪರಿಮಿತಿಯ ವಾದವು ವಾಸ್ತವಾಂಶ ಮತ್ತು ಕಾನೂನಿನ ಸಂಯೋಜಿತ ಪ್ರಶ್ನೆಯೆಂದು ಇತ್ಯರ್ಥವಾಗಿರುತ್ತದೆ. ವಾಸ್ತವ ವಿವಾದಾಂಶಗಳ ಜೊತೆಗೆ ಕಾನೂನಿನ ವಿವಾದಗಳನ್ನು ಅಧಿವಿಚಾರಿಸುವ ಅಧಿಕಾರ ವ್ಯಾಪ್ತಿಯನ್ನು, ಇಡೀ ದಾವೆಯನ್ನು ಕೇವಲ ಕಾನೂನಿನ ವಿವಾದಾಂಶಗಳ ಮೇಲೆ ವಿಲೆ ಮಾಡಬಹುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ ಮಾತ್ರ ಚಲಾಯಿಸಬಹುದು. ಆದರೆ ಸಂಹಿತೆಯು, ಪೂರ್ವಭಾವಿ ವಿವಾದಾಂಶದಂತೆ ಕಾನೂನು ಮತ್ತು ವಾಸ್ತವಾಂಶದ ಸಂಯೋಜಿತ ವಿವಾದಾಂಶಗಳನ್ನು ಅಧಿವಿಚಾರಿಸಲು ನ್ಯಾಯಾಲಯದ ಮೇಲೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಪ್ರದತ್ತ ಮಾಡಿರುವುದಿಲ್ಲ. ಆದ್ದರಿಂದ, ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸಲಾಗುವುದಿಲ್ಲ.

22. ಪ್ರಸ್ತುತ ಮೊಕದ್ದಮೆಯಲ್ಲಿ, ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶದ ಮೇಲೆ ಸಾಕ್ಷ್ಯವನ್ನು ಮಂಡಿಸಲು ಅನುಮತಿ ಕೋರಿ, ವಾದಿಯು ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ, ಮುಖ್ಯ ಸಾಕ್ಷ್ಯಕ್ಕೆ ಅನುಮತಿ ನೀಡದೆ, ವಾದಪತ್ರದಲ್ಲಿನ ದೃಢೋಕ್ತಿಗಳ ಆಧಾರದ ಮೇಲೆ ಮಾತ್ರ ಕಾಲಪರಿಮಿತಿಗೆ ಸಂಬಂಧಿಸಿದ

ವಿವಾದಾಂಶವನ್ನು ನಿರ್ಧರಿಸುವುದು. ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಕಾನೂನು ಬಾಹಿರವಾದುದಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು, ಕಾಲಪರಿಮಿತಿಗೆ ಸಂಬಂಧಿಸಿದ ವಿವಾದವನ್ನು ಪ್ರಾಥಮಿಕ ವಿವಾದಾಂಶದಂತೆ ಅಧಿವಿಚಾರಿಸಲು ಯಾವುದೇ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯದ ಸದರಿ ತೀರ್ಮಾನವು ಊರ್ಜಿತವಾಗಿರುವುದಿಲ್ಲ. ತದನುಸಾರವಾಗಿ ಇದನ್ನು ಈ ಮೂಲಕ ರದ್ದುಪಡಿಸಲಾಗಿರುತ್ತದೆ.

**ಕಾನೂನಿನಿಂದ ಪ್ರತಿಷೇಧಿತವಾದ ವಿವಾದಾಂಶ ಸಂ.(ಬಿ)**

23. ದಾವೆಯನ್ನು ಕಾಲಪರಿಮಿತಿಯಿಂದ ಪ್ರತಿಷೇಧಿಸಬೇಕೆಂದು ಕಂಡುಬಂದಲ್ಲಿ, ದಾವೆಯನ್ನು ಪುರಸ್ಕರಿಸಲು ನ್ಯಾಯಾಲಯದ ಮೇಲೆ ಕಾಲಪರಿಮಿತಿ ಅಧಿನಿಯಮ, 1963ರ 3(1)ನೇ ಪ್ರಕರಣವು ನಿರ್ಬಂಧವನ್ನು ಹೇರುತ್ತದೆ. 3ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿರುತ್ತದೆ.

***3. ನಿರ್ಬಂಧಕಾಜ್ಞೆಯ ನಿರ್ಬಂಧ.–***

*(1) 4 ರಿಂದ 24ರವರೆಗಿನ ಪ್ರಕರಣಗಳಲ್ಲಿ ಒಳಗೊಂಡ ಉಪಬಂಧಗಳಿಗೆ ಒಳಪಟ್ಟು, ಗೊತ್ತುಪಡಿಸಿದ ಅವಧಿಯ ತರುವಾಯ ಆರಂಭಿಸಿರುವ ಪ್ರತೀ ದಾವೆಯನ್ನು, ಸಲ್ಲಿಸಿದ ಅಪೀಲನ್ನು ಮತ್ತು ಸಲ್ಲಿಸಿದ ಅರ್ಜಿಯನ್ನು, ಕಾಲಪರಿಮಿತಿಯನ್ನು ಪ್ರತಿವಾದದಂತೆ ರೂಪಿಸದಿದ್ದಾಗ್ಯೂ, ವಜಾಗೊಳಿಸತಕ್ಕದ್ದು.*

24. 4 ರಿಂದ 24ರ ವರೆಗಿನ ಪ್ರಕರಣಗಳಿಗೆ ಒಳಪಟ್ಟು ಕಾಲಪರಿಮಿತಿಯು ಗೊತ್ತುಪಡಿಸಿದ ಅವಧಿಯ ತರುವಾಯ ಆರಂಭಿಸಿದ ದಾವೆಯನ್ನು,

ಕಾಲಪರಿಮಿತಿಯನ್ನು ಪ್ರತಿವಾದದಂತೆ ರೂಪಿಸದಿದ್ದಾಗ್ಯೂ ವಜಾಗೊಳಿಸತಕ್ಕದ್ದೆಂದು ಈ ಪ್ರಕರಣವು ಉಪಬಂಧ ಕಲ್ಪಿಸಿರುತ್ತದೆ. ಹೀಗೆಂದರೆ, ಕಾಲಪರಿಮಿತಿಯ ಅವಧಿಯ ತರುವಾಯ ಒಂದು ದಾವೆ ಅಥವಾ ಇತರೆ ನಡಾವಳಿಗಳನ್ನು ಆರಂಭಿಸಿದಡೆಯಲ್ಲಿ, ಕಾಲಪರಿಮಿತಿಯನ್ನು ಪ್ರತಿವಾದದಂತೆ ರೂಪಿಸದಿದ್ದಾಗ್ಯೂ, ವಜಾಗೊಳಿಸಲೇಬೇಕಾಗಿರುತ್ತದೆ. ಕಾಲಪರಿಮಿತಿಯ ಪ್ರಶ್ನೆಯು, ಸಾಮಾನ್ಯವಾಗಿ ಕಾನೂನು ಮತ್ತು ವಾಸ್ತವಾಂಶದ ಸಂಯೋಜಿತ ಪ್ರಶ್ನೆಯಾಗಿರುತ್ತದೆ. ಸಂಹಿತೆಯ 11ನೇ ನಿಯಮದ ಆದೇಶವು, ವಾದಪತ್ರದಲ್ಲಿನ ಅಪರಾಧಗಳನ್ನು ಯಾವುದೇ ಕಾನೂನಿನ ಮೂಲಕ ನಿಷೇಧಿಸಬೇಕೆಂದು ಕಂಡು ಬಂದಲ್ಲಿ, ವಾದಪತ್ರವನ್ನು ತಿರಸ್ಕರಿಸತಕ್ಕದ್ದೆಂದು ಅಗತ್ಯಪಡಿಸುತ್ತದೆ. ಹಾಗಾಗಿ, ವಾದಪತ್ರದಲ್ಲಿನ ಹೇಳಿಕೆಗಳಿಂದ, ದಾವೆಯನ್ನು ಕಾಲಪರಿಮಿತಿ ನಿಗದಿಪಡಿಸಿದ ಅವಧಿಯ ತರುವಾಯ ಆರಂಭಿಸಲಾಗಿದೆಯೆಂದು ಕಂಡುಬಂದಲ್ಲಿ, ವಾದಪತ್ರವನ್ನು ತಿರಸ್ಕರಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಆದರೆ, ಕಾಲಪರಿಮಿತಿ ಅಧಿನಿಯಮದ 3ನೇ ಪ್ರಕರಣದಡಿಯಲ್ಲಿ, ನ್ಯಾಯಾಲಯದ ಕರ್ತವ್ಯವು ಕಾಲಪರಿಮಿತಿಯ ಅವಧಿಯ ತರುವಾಯ ದಾವೆಯನ್ನು ಆರಂಭಿಸಿದಲ್ಲಿ, ದಾವೆಯನ್ನು ವಜಾಗೊಳಿಸುವುದೇ ಆಗಿರುತ್ತದೆ. ಕಾಲಪರಿಮಿತಿಯ ಅವಧಿಯ ತರುವಾಯ ಆರಂಭಿಸಿರುವ ದಾವೆಯು ಸ್ವತಃ ವಾದಪತ್ರದಲ್ಲಿನ ಆಪಾದನೆಗಳ ಮೇಲೆ ಅವಲಂಬಿಸಿದ್ದು ವಾದಪತ್ರವನ್ನು ತಿರಸ್ಕರಿಸುವುದು ಸರಿಯಾದ ತೀರ್ಮಾನವಾಗಿರುತ್ತದೆ ಮತ್ತು ಅಂಥ ತೀರ್ಮಾನವನ್ನು ಅಧಿವಿಚಾರಣೆಯ ತರುವಾಯ ಆಧರಿಸಿದಲ್ಲಿ, ನ್ಯಾಯಾಲಯವು ದಾವೆಯನ್ನು ವಜಾಗೊಳಿಸಬಹುದಾಗಿರುತ್ತದೆಂಬುದು ಎರಡು ಉಪಬಂಧಗಳನ್ನು ಸಂಯೋಜಿಸಿದಾಗ ಆಗಬಹುದಾದ ಪರಿಣಾಮವಾಗಿರುತ್ತದೆ. ದಾವೆಯನ್ನು ಮೇಲ್ನೋಟಕ್ಕೆ ಕಾಲಪರಿಮಿತಿಯ ಮೂಲಕ ನಿಷೇಧಿಸಿದಲ್ಲಿ, ಅಂಥ ನಿಷೇಧದಿಂದ ದಾವೆಯನ್ನು ಉಳಿಸಿದಂಥ ಸಂದರ್ಭಗಳನ್ನು ರುಜುವಾತುಪಡಿಸುವ ಹೊಣೆಯು ವಾದಿಯ ಮೇಲಿರುತ್ತದೆ. ರುಜುವಾತುಪಡಿಸುವ ಹೊಣೆಯು, ದಾವೆಯು ಸಕಾಲಿಕವಾದುದಾಗಿರುತ್ತದೆ ಮತ್ತು ವಾದಿಯು ವಾದಿಸಬೇಕೆಂದು ಮತ್ತು ರುಜುವಾತುಪಡಿಸಬೇಕೆಂದು ಅಗತ್ಯಪಡಿಸಿದ ಕಾಲಪರಿಮಿತಿಯ ಮೂಲಕ ಪ್ರತಿಷೇಧಿಸಲಾಗಿರುವುದಿಲ್ಲವೆಂಬುದನ್ನು ತೋರಿಸಬೇಕಾಗಿರುತ್ತದೆ. ಸಿವಿಲ್ ಪ್ರಕ್ರಿಯಾ

ಸಂಹಿತೆಯ ಈ ಮೂಲಭೂತ ನಿಯಮಗಳು, ದಾವೆಯು ಕಾಲವನ್ನು ಮೀರಿದೆಯೆಂದು ಎಲ್ಲಾ ವಾದಪತ್ರಗಳ ದೃಢೋಕ್ತಿಗಳಲ್ಲಿ ಕಂಡುಬಂದಲ್ಲಿ, ಕಾಲಪರಿಮಿತಿಯಿಂದ ದಾವೆಯನ್ನು ಉಳಿಸಿದಂಥ ಆಧಾರದ ಮೇಲೆ ಸಹ ವ್ಯಾಜ್ಯ ಕಾರಣದ ದಿನಾಂಕವನ್ನು, ವಾದಿಯನ್ನು ತನ್ನ ವಾದಪತ್ರದಲ್ಲಿ ಹೇಳಲು ಅಗತ್ಯಪಡಿಸಿರುತ್ತವೆ. ಹಾಗಾಗಿ, ವಾದಿಯು ರೂಪಿಸಿರುವಂಥ ದಾವೆಯು ಸಕಾಲಿಕವಾಗಿದ್ದು, ಒಂದು ನಿರ್ದಿಷ್ಟ ಅನುಚ್ಛೇದದಡಿಯಲ್ಲಿ ಬರುತ್ತದೆ. ಆದರೆ, ಬೇರೆ ಅನುಚ್ಛೇಧದ ಅಡಿಯಲ್ಲಿ ಕಾಲಪರಿಮಿತಿಯ ನಿಷೇಧವನ್ನು ಪ್ರತಿವಾದಿಯು ರೂಪಿಸಿದ್ದು ಇದರಿಂದಾಗಿ, ಪ್ರತಿವಾದಿಯು, ಆ ಅನುಚ್ಛೇದವನ್ನು ವಾದಿಸಿ, ಅನ್ವಯಿಸುವ ಅವಶ್ಯಕತೆಯನ್ನು ಸುಸ್ಥಾಪಿಸಬೇಕಾಗಿರುತ್ತದೆ.

25. ***ಪೊಪಟ್ ಮತ್ತು ಕೊಟೆಚಾ ಪ್ರಾಪರ್ಟಿ -ವಿರುದ್ಧ- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಅಸೋಸಿಯೇಷನ್*** [3], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"10. ಯಾವುದೇ ಕಾನೂನಿನಿಂದ ಪ್ರತಿಷೇಧಿಸಬೇಕೆಂದು ವಾದ ಪತ್ರದಲ್ಲಿನ ಹೇಳಿಕೆಯಿಂದ ಕಂಡುಬಂದಂತೆ 11ನೇ ನಿಯಮದ 7ನೇ ಕ್ರಮಾದೇಶದ (ಡಿ) ಖಂಡವು, ದಾವೆಯನ್ನು ಕುರಿತಂತೆ ವಿವರಣೆ ನೀಡುತ್ತದೆ. ವಿವಾದಿತ ಪ್ರಶ್ನೆಗಳನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸುವ ಸಮಯದಲ್ಲಿ ನಿರ್ಧರಿಸಲಾಗುವುದಿಲ್ಲ. 7ನೇ ಕ್ರಮಾದೇಶದ 11ನೇ ನಿಯಮದ (ಡಿ)ಖಂಡವನ್ನು ಜಾರಿಯಲ್ಲಿರುವ ಕಾನೂನಿನಿಂದ ದಾವೆಯು ಪ್ರತಿಷೇಧಿತವಾಗಿದೆಯೆಂದು ತೋರಿಸುವ ಯಾವುದೇ ಸಂದೇಹ ಅಥವಾ ವಿವಾದವಲ್ಲದೆ ವಾದಪತ್ರದಲ್ಲಿ ವಾದಿಯು*

3. (2005) 7 ಎಸ್‌ಸಿಸಿ 510

*ರೂಪಿಸಿದ ಹೇಳಿಕೆ ಇರುವೆಡೆ ಮಾತ್ರವೇ ಅಂಥ ಪ್ರಕರಣಗಳಲ್ಲಿ ಅನ್ವಯಿಸಲಾಗುತ್ತದೆ".*

26. ***ಸಲೀಂ ಬಾಯ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ*** [4], ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:–

*ಅರ್ಜಿಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಅವಶ್ಯಕತೆಯಿರುವಂಥ ಸಮುಚಿತ ವಾಸ್ತವಾಂಶಗಳು ವಾದಪತ್ರದಲ್ಲಿನ ದೃಢೋಕ್ತಿಗಳಾಗಿರುತ್ತವೆ. ಅಧಿವಿಚಾರಣಾ ನ್ಯಾಯಾಲಯವು ದಾವೆಯ ಯಾವುದೇ ಹಂತದಲ್ಲಿ ಅಂದರೆ, ವಾದ ಪತ್ರವನ್ನು ನೋಂದಾಯಿಸುವುದಕ್ಕೆ ಮೊದಲು ಅಥವಾ ಪ್ರತಿವಾದಿಗೆ ಸಮನುಗಳನ್ನು ನೀಡುವುದಕ್ಕೆ ಮೊದಲು ಅಥವಾ ಅಧಿವಿಚಾರಣೆ ಮುಕ್ತಾಯವಾಗುವ ಮೊದಲು ಯಾವುದೇ ಸಮಯದಲ್ಲಿ ಅಧಿಕಾರವನ್ನು ಚಲಾಯಿಸಬಹುದು. ಸಂಹಿತೆಯ 11ನೇ ನಿಯಮದ 7ನೇ ಕ್ರಮಾದೇಶದ (ಎ) ಮತ್ತು (ಡಿ) ಖಂಡಗಳಡಿಯಲ್ಲಿ ಅರ್ಜಿಯನ್ನು ನಿರ್ಧರಿಸುವ ಉದ್ದೇಶಕ್ಕೆ ವಾದಪತ್ರದಲ್ಲಿ ದೃಢೋಕ್ತಿಗಳು ಸಂಬಂಧಿಸುತ್ತವೆ; ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಯು ಕೈಗೊಂಡ ವಾದಗಳು ಯಾವುದೇ ಹಂತದಲ್ಲಿ ಸಮುಚಿತವಾಗಿರುವುದಿಲ್ಲ.*

27. ***ಸತ್ತಿ ಪರದೇಶಿ ಸಮಾಧಿ –ವಿರುದ್ಧ– ಎಂ. ಸಂಕುತಲ*** [5], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

4. (2003) 1 ಎಸ್‌ಸಿಸಿ 557

5. ಎಐಆರ್ (ಎಸ್‌ಸಿಡಬ್ಲ್ಯು) 2014

*"13. ಪ್ರಸ್ತುತ ಮೊಕದ್ದಮೆಯಲ್ಲಿ, ಕಾಲಪರಿಮಿತಿ ಅಧಿನಿಯಮದ 10ನೇ ಪ್ರಕರಣದಡಿಯಲ್ಲಿ ವಾದಿಯನ್ನು ಸಂರಕ್ಷಿಸಲಾಗುವುದಿಲ್ಲವೆಂಬ ವಾಸ್ತವಾಂಶವನ್ನು ನಿರ್ಧರಿಸಲಾಗದ ಹೊರತು, ದಾವೆಯನ್ನು ಕಾಲಪರಿಮಿತಿಯ ಆಧಾರದ ಮೇಲೆ ವಜಾಗೊಳಿಸಲಾಗುವುದಿಲ್ಲವೆಂಬುದು ನಮಗೆ ಕಂಡು ಬಂದಿರುತ್ತದೆ. ಪ್ರಾಥಮಿಕ ವಿವಾದಾಂಶದ ನ್ಯಾಯ ನಿರ್ಣಯಕ್ಕೆ ಅದನ್ನು ರೂಪಿಸಲು ನ್ಯಾಯಾಲಯವನ್ನು ಸಮರ್ಥಗೊಳಿಸುವಂಥ 2ನೇ ನಿಯಮದ 14ನೇ ಕ್ರಮಾದೇಶದ ಪರಿಧಿ ಮತ್ತು ವ್ಯಾಪ್ತಿಯೊಳಗೆ ಬರುತ್ತದೆಂಬುದು ಪ್ರಶ್ನೆಯಾಗಿರುವುದಿಲ್ಲ. ಇಲ್ಲಿ ಮಾನ್ಯ ಏಕಸದಸ್ಯ ನ್ಯಾಯ ಪೀಠದ ನ್ಯಾಯಾಧೀಶರು, ಸಂಪೂರ್ಣವಾಗಿ ಮರೆತು ಹೋಗಿದ್ದ ಸದರಿ ಆಯಾಮವನ್ನು ನೆನಪಿಸಿರುತ್ತಾರೆ ಮತ್ತು 2ನೇ ನಿಯಮ, 14ನೇ ಕ್ರಮಾದೇಶದಡಿಯಲ್ಲಿ ಬರುವಂತೆ ಹೇಗೋ ಹಾಗೆ, ನ್ಯಾಯನಿರ್ಣಯ ಮಾಡಿರುತ್ತಾರೆಂಬುದು ಕಂಡು ಬಂದಿರುತ್ತದೆ. ಕಾಲಪರಿಮಿತಿ ಅಧಿನಿಯಮದ 10ನೇ ಪ್ರಕರಣದ ಯೋಜನೆಯ ಮೇಲೆ, ಸದರಿ ಉಪಬಂಧಗಳ ವಲಯದಿಂದ ದಾವೆಯ ಮೂಲಕ ಕೆಲವು ವಾಸ್ತವಾಂಶಗಳನ್ನು ಸುಸ್ಥಾಪಿಸಲಾಗಿರುತ್ತದೆ. ಇದರಿಂದ ಇದು ಕಾಲಪರಿಮಿತಿಯ ಪರಿಕಲ್ಪನೆಯೊಳಗೆ ಬರುತ್ತದೆಂಬುದನ್ನು ನಾವು ಪುನರಾವರ್ತಿಸುತ್ತಿದ್ದೇವೆ. ವಿಭಾಗೀಯ ಪೀಠವು, ವಿಷಯವನ್ನು ಸರಿಯಾದ ಆಯಾಮದಲ್ಲಿ ಗ್ರಹಿಸದೆ ಕೆಲ ತಪ್ಪುಗಳನ್ನು ಮಾಡಿರುತ್ತದೆ. ಅದರ ಜೊತೆಗೆ ಹನ್ನೆರಡು ವರ್ಷಗಳ ಕಾಲಪರಿಮಿತಿ ಇರಬಹುದೆಂಬ ಸಂದರ್ಭದಲ್ಲಿ, "ಮೌಲ್ಯಯುತ ಪರಿಗಣನೆಗೆ ಸಂಬಂಧಿಸಿದಂತೆ ನ್ಯಾಸಧಾರಿಯಿಂದ ವರ್ಗಾಯಿಸಲಾಗಿದೆ"*

*ಯೆಂಬ ಪದಗಳನ್ನು ಇದು ಬಳಸಿರುವ ಉಪಯುಕ್ತತೆಯನ್ನು ಪ್ರಸ್ತಾಪಿಸದೆ 92ರಿಂದ 96ರ ವರೆಗಿನ ಅನುಚ್ಛೇದಗಳನ್ನು ಅವಲಂಬಿಸಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ, ವಾದಿಯ ದೃಢೋಕ್ತಿಯು, ನ್ಯಾಸಧಾರಿಯು ತನ್ನ ಇಬ್ಬರು ಹೆಣ್ಣುಮಕ್ಕಳು ಮತ್ತು ಮೊಮ್ಮಗಳ ಹೆಸರಿನಲ್ಲಿ ಮೂರು ಇತ್ಯರ್ಥ ಪತ್ರಗಳನ್ನು ಸೃಜಿಸಿದೆಯೆಂಬುದಾಗಿರುತ್ತದೆ. ಪರಿಗಣನೆಯ ವಿವಾದಾಂಶವು ಈವರೆಗೂ ಕಂಡು ಬಂದಿರುವುದಿಲ್ಲ. ತಂದೆಯಿಂದ ಆಗಿರುವ ಈ ಇತ್ಯರ್ಥವು ಪರಿಗಣನೆಗೆ ಸಂಬಂಧಿಸಿದಂತೆ ಇರುವುದೇ ಅಥವಾ ಇರುವುದಿಲ್ಲವೋ ಮತ್ತು ಅಂತೆಯೇ ನ್ಯಾಸದಂತೆ ನ್ಯಾಸಕ್ಕೆ ಸಂಬಂಧಿಸಿದ ಸ್ವತ್ತು ಕಾಲಪರಿಮಿತಿಯ ಅಧಿನಿಯಮದ 10ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಬರುವಂತೆ ಅರ್ಥೈಸಿಕೊಳ್ಳಬೇಕೆ ಎಂಬುದನ್ನು ಖಚಿತಪಡಿಸಿಕೊಳ್ಳ ಬೇಕಾಗಿರುತ್ತದೆ. ಆ ಕಾರಣದಿಂದ, ಮಾನ್ಯ ಏಕಸದಸ್ಯ ನ್ಯಾಯಪೀಠದ ನ್ಯಾಯಾಧೀಶರು ರೂಪಿಸಿರುವ ವಿವಾದಾಂಶ ಸಂ.1 ವಾಸ್ತವಾಂಶ ಮತ್ತು ಕಾನೂನನ್ನು ಒಳಗೊಂಡಿರುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಹಾಗಾಗಿ, ಪ್ರಾಥಮಿಕ ವಿವಾದಾಂಶದಂತೆ ಅದನ್ನು ನ್ಯಾಯ ನಿರ್ಣಯಿಸಲಾಗುವುದಿಲ್ಲ. ಆದ್ದರಿಂದ ಪ್ರಶ್ನಿತ ಆದೇಶವು ಸಂಪೂರ್ಣವಾಗಿ ಅನೂರ್ಜಿತ ವಾದುದಾಗಿರುತ್ತದೆ".*

28. ಮೊದಲ ಪ್ರತಿವಾದಿಯು, ಕಾಲಪರಿಮಿತಿಯ ಕಾನೂನಿನಿಂದ ಪ್ರತಿಷೇಧಿಸಿದಂತೆ ವಾದಪತ್ರವನ್ನು ತಿರಸ್ಕರಿಸಲು ನ್ಯಾಯಾಲಯವನ್ನು ಕೋರಿ, ಸಂಹಿತೆಯು 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅವರ ಪ್ರಕಾರ, ವಾದಿಯು 05.07.1980ರಂದು ಜನ್ಮ ತಳೆದಿರುತ್ತಾರೆ.

ಆತ ಅಪ್ರಾಪ್ತನಾಗಿದ್ದಾಗ, 29.05.1983ರಂದು ಆತನ ಅಜ್ಜಿಯು ಕ್ರಯಪತ್ರವನ್ನು ಸಿದ್ಧಗೊಳಿಸಿರುತ್ತಾಳೆ. ವಾದಿಯು 05.07.1998ರಂದು ವಯಸ್ಕನಾಗಿರುತ್ತಾನೆ. ವಾದಪತ್ರದಲ್ಲಿ ಕೋರಿದಂತೆ ಘೋಷಣೆ ಮಾಡಲು ಬಯಸಿದಲ್ಲಿ, ವಯಸ್ಕನಾದ ದಿನಾಂಕದಿಂದ ಮೂರು ವರ್ಷಗಳೊಳಗೆ ದಾವೆಯನ್ನು ಆತ ಸಲ್ಲಿಸಬೇಕು. 2007ನೇ ವರ್ಷದಲ್ಲಿ ಸಲ್ಲಿಸಲಾಗಿರುವ ದಾವೆಯ ಕಾಲಪರಿಮಿತಿಯು ಕಾನೂನಿನಿಂದ ಸ್ಪಷ್ಟವಾಗಿ ಪ್ರತಿಷೇಧಿತವಾಗಿದೆ. ಆದ್ದರಿಂದ, ಮೊದಲ ಪ್ರತಿವಾದಿಗೆ ಅನುಸಾರವಾಗಿ, ಪ್ರಕರಣವು 11(ಡಿ) ನಿಯಮದ 7ನೇ ಆದೇಶದಡಿಯಲ್ಲಿ ಬರುತ್ತದೆ.

29. ಪರಿಮಿತಿಯ ಕಾಲದೊಳಗೆ ದಾವೆಯನ್ನು ಸಲ್ಲಿಸಲಾಗಿದೆಯೆಂದು ಮತ್ತು ದಾವೆಯು ಸಕಾಲಿಕವಾಗಿದೆಯೆಂದು ವಾದಪತ್ರದಲ್ಲಿ ವಾದಿಯು ನಿರ್ದಿಷ್ಟವಾಗಿ ಒತ್ತಿ ಹೇಳಿರುವಾಗ, ನ್ಯಾಯಾಲಯವು, ಹೇಳಿಕೆಯು ಸರಿಯಾದುದೆ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳಲು ಮತ್ತು ಸದರಿ ವಿವಾದಾಂಶವನ್ನು ನಿರ್ಧರಿಸಲು ನಿಯಮ 11 (ಡಿ)ಯು 7ನೇ ಕ್ರಮಾದೇಶದಲ್ಲಿ ಪ್ರತಿವಾದಿಯು ಸಲ್ಲಿಸಿದ ಅರ್ಜಿಯ ಮೇಲೆ ವಿಚಾರಣೆಯನ್ನು ಆರಂಭಿಸಲಾಗುವುದಿಲ್ಲ. 3ನೇ ಪ್ರಕರಣದಡಿಯಲ್ಲಿ ಕಾಲಪರಿಮಿತಿಯ ನಿಷೇಧದ ಆಧಾರದ ಮೇಲೆ ತಿರಸ್ಕರಿಸಬೇಕಾದ ವಾದಪತ್ರವು, ವಾದಪತ್ರದ ದೃಢೋಕ್ತಿಗಳಲ್ಲಿ ಮಾತ್ರ ನೋಡಬೇಕಾದವುಗಳಾಗಿರುತ್ತವೆ. ದಾವೆಯು ಕಾಲಪರಿಮಿತಿಯಿಂದ ನಿಷೇಧಿಸಲಾಗಿದೆಯೆಂಬುದನ್ನು ವಾದಪತ್ರದ ದೃಢೋಕ್ತಿಗಳು ಬಹಿರಂಗಪಡಿಸದಿದ್ದಲ್ಲಿ, ತರುವಾಯ, 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿ ವಾದಪತ್ರವನ್ನು ತಿರಸ್ಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಾಲಪರಿಮಿತಿಯ ನಿಷೇಧದ ವಾದವನ್ನು ಪ್ರತಿವಾದಿಯು ಎತ್ತಿದಾಗ, ನ್ಯಾಯಾಲಯವು ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ರೂಪಿಸಲು ಬದ್ಧವಾಗಿರುತ್ತದೆ. ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು, ಪ್ರಾಥಮಿಕ ವಿವಾದಾಂಶದಂತೆ, ಅಧಿವಿಚಾರಿಸದೆ, ಸದರಿ ವಿವಾದಾಂಶವನ್ನು, ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ಒಳಗೊಂಡಂತೆ ದಾವೆಯಲ್ಲಿ ರೂಪಿಸಿದ ಎಲ್ಲಾ ವಿವಾದಾಂಶಗಳ ಮೇಲೂ ಸಾಕ್ಷ್ಯವನ್ನು ದಾಖಲಿಸಿದ ತರುವಾಯ ಸದರಿ ವಿವಾದಾಂಶವನ್ನು ನಿರ್ಧರಿಸಬೇಕಾಗುತ್ತದೆ. ಆ ತರುವಾಯ ಮಾತ್ರವೇ ನ್ಯಾಯಾಲಯವು, ದಾವೆಯನ್ನು ಕಾಲಪರಿಮಿತಿಯ

ಕಾನೂನಿನಿಂದ ದಾವೆಯನ್ನು ಪ್ರತಿಷೇಧಿಸಲಾಗಿದೆಯೇ ಎಂಬ ಪ್ರಶ್ನೆಯನ್ನು ನಿರ್ಧರಿಸಬೇಕಾಗಿರುತ್ತದೆ. ಆದ್ದರಿಂದ ಸಿವಿಲ್ ಪ್ರಕ್ರಿಯಾ ಸಂಹಿತೆಯ 11(ಡಿ) ನಿಯಮದ 7ನೇ ಕ್ರಮಾದೇಶದಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಪರಿಮಿತಿಯನ್ನು, ಪ್ರತಿಷೇಧದ ಪ್ರಶ್ನೆಯನ್ನು ನ್ಯಾಯಾಲಯವು ವಿಶ್ಲೇಷಿಸಬೇಕೆಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ದಾವೆಯು ಕಾಲಪರಿಮಿತಿಯು ಮೂಲಕ ಪ್ರತಿಷೇಧಿತವಾಗಿದೆಯೆಂಬ ಆಧಾರದ ಮೇಲೆ ದಾವಾಪತ್ರವನ್ನು ತಿರಸ್ಕರಿಸಿರುವುದು ಸ್ಪಷ್ಟವಾಗಿ ಕಾನೂನುಬಾಹಿರವಾಗಿದ್ದು, ಊರ್ಜಿತವಾಗಿರುವುದಿಲ್ಲ. ವಿಷಯದ ಈ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶವು ಊರ್ಜಿತವಾಗಿರುವುದಿಲ್ಲ.

30. ಅಧಿವಿಚಾರಣಾ ನ್ಯಾಯಾಲಯವು, ವಾದಿಯು ವಾದಪತ್ರದಲ್ಲಿ ಸಹಿ ಮಾಡಿಲ್ಲವೆಂಬ ಮತ್ತು ಮುಖ್ತ್ಯಾರನಾಮೆಧಾರಕನ ಹೆಸರಿನಲ್ಲಿ ಜಾರಿ ಮಾಡಿರುವ ಮುಖ್ತ್ಯಾರನಾಮೆಯನ್ನು ಹಾಜರುಪಡಿಸಿಲ್ಲವೆಂಬ ಆಧಾರದ ಮೇಲೆ ದಾವೆಯನ್ನು ವಜಾ ಮಾಡಿರುತ್ತದೆ. 11ನೇ(ಡಿ)ನಿಯಮದ 7ನೇ ಕ್ರಮಾದೇಶದಡಿಯಲ್ಲಿ ವಾದಪತ್ರವನ್ನು ತಿರಸ್ಕರಿಸುವ ಆಧಾರವಾಗಿರುವುದಿಲ್ಲ. ಇದು ಎಲ್ಲ ವಿವಾದಾಂಶಗಳ ಮೇಲೆ ವಿಚಾರಣೆ ಮಾಡಿದಂಥ ಮತ್ತು ಸಾಕ್ಷ್ಯವನ್ನು ದಾಖಲು ಮಾಡಿಕೊಂಡಂಥ ವಿಷಯವಾಗಿರುತ್ತದೆ. ಆ ಅವಧಿಯಲ್ಲಿ, ವಾದಪತ್ರವನ್ನು ಸಹಿ ಮಾಡಲು ಯುಕ್ತವಾಗಿ ಅಧಿಕೃತಗೊಳಿಸಿದ ಸಿಂಧುವಾದ ಮುಖ್ತ್ಯಾರನಾಮೆಯನ್ನು ಈತ ಜಾರಿಗೊಳಿಸಿರುತ್ತಾನೆಂದು ತೋರಿಸುವ ಮುಖ್ತ್ಯಾರನಾಮೆಯನ್ನು ಹಾಜರುಪಡಿಸಲು ವಾದಿಗೆ ಅವಕಾಶ ದೊರೆತಂತಾಗಿರುತ್ತದೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯದ ಇಡೀ ಅಭಿಪ್ರಾಯ ತಪ್ಪಾಗಿರುತ್ತದೆ. ದುರಾದೃಷ್ಟವಶಾತ್, ಅಧಿವಿಚಾರಣಾ ನ್ಯಾಯಾಲಯ ಈ ಅರ್ಜಿಯನ್ನು ವಿಲೆ ಮಾಡಲು ಸಾಕಷ್ಟು ಸಮಯವನ್ನು ಕಳೆದಿರುತ್ತದೆ. ಹಾಗಾಗಿ, ಇದರ ನ್ಯಾಯಿಕ ಸಮಯ ನಿರರ್ಥಕವಾಗಿರುತ್ತದೆ. ಎಲ್ಲಾ ವಿವಾದಾಂಶಗಳ ಮೇಲೆ ಇದು ಸಾಕ್ಷ್ಯವನ್ನು ದಾಖಲಿಸಿಕೊಂಡಿದ್ದಲ್ಲಿ, ಈ ಅಪೀಲಿನಲ್ಲಿ ಈ ವ್ಯಾಜ್ಯವನ್ನು ಪರಿಶೀಲನೆ ಮತ್ತು ಇದಕ್ಕೆ ಅಂತ್ಯ ಹಾಡಲು

ಒಂದು ಅಂತಿಮ ಆದೇಶ ನೀಡುವುದನ್ನು ಒಳಗೊಂಡಂತೆ, ಗುಣಾವಗುಣಗಳ ಆಧಾರದ ಮೇಲೆ ದಾವೆ ಬಹುಶಃ ವಿಲೆಯಾಗಿಬಿಡುತ್ತಿತ್ತು.

31. ಈ ಸಂದರ್ಭಗಳಡಿಯಲ್ಲಿ, ನಾವು ಈ ಮುಂದಿನ ಆದೇಶವನ್ನು ಹೊರಡಿಸಿರುತ್ತೇವೆ:

(ಎ) ಅಪೀಲನ್ನು ಅಂಗೀಕರಿಸಿರುತ್ತೇವೆ.

(ಬಿ) ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವನ್ನು ರದ್ದುಪಡಿಸಲಾಗಿರುತ್ತದೆ.

(ಸಿ) ಮೂಲ ದಾವೆಯುನ್ನು ಅದರ ಮೂಲ ಕಡತಕ್ಕೆ ಪುನಃ ಸೇರಿಸಲಾಗಿರುತ್ತದೆ.

(ಡಿ) ಎಲ್ಲಾ ವಿವಾದಾಂಶಗಳ ಮೇಲೆ ಸಾಕ್ಷ್ಯವನ್ನು ದಾಖಲಿಸಿ, ತರುವಾಯ ಕಾಲಪರಿಮಿತಿಗೆ ಸಂಬಂಧಿಸಿದ ವಿವಾದಾಂಶವನ್ನು ಒಳಗೊಂಡಂತೆ ಗುಣಾವಗುಣಗಳ ಮೇಲೆ ತೀರ್ಪನ್ನು ನೀಡಲು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿರುತ್ತದೆ.

(ಇ) 11(ಡಿ)ನಿಯಮದ 7ನೇ ಕ್ರಮಾದೇಶದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ವಜಾಗೊಳಿಸಲಾಗಿರುತ್ತದೆ.

ಪಕ್ಷಕಾರರು ಅವರೇ ಸ್ವತಃ ತಮ್ಮ ವೆಚ್ಚಗಳನ್ನು ಭರಿಸಬೇಕಾಗಿರುತ್ತದೆ.